DEVU PATTAR
GUTTIPETH,
HAHAPUR-585223

ಸಂಕ್ರಮಣ

ಅಭಿಪ್ರಾಯದ ಕೃತಿಗಾಗಿ

[illegible]

ಸಂಕ್ರಮಣ – ೬೩

ಸಿದ್ಧಲಿಂಗ ಪಟ್ಟಣಶೆಟ್ಟಿ / ಚಂದ್ರಶೇಖರ ಪಾಟೀಲ

ಸಂಕ್ರಮಣ ಪ್ರಕಾಶನ, ಧಾರವಾಡ – ೪

ಸಂಕ್ರಮಣ - ೬೩ : ಡಿಶಂಬರ ೧೫, ೧೯೭೪

•

ವರ್ಷದ ಆರು ಪ್ರಕಟನೆಗಳಿಗೆ ಹತ್ತು ರೂಪಾಯಿ

•

ವಿಳಾಸ : 'ಸಂಕ್ರಮಣ', ಬಿ ೨, ವಿದ್ಯಾಗಿರಿ, ಧಾರವಾಡ – ೫೮೦೦೦೪

•

ಸಂಕ್ರಮಣದಲ್ಲಿ ಪ್ರಕಟವಾಗುವ ಲೇಖನಗಳಲ್ಲಿಯ
ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರು.

•

ಮನೋಹರ ಮುದ್ರಣಾಲಯ, ಧಾರವಾಡ – ೫೮೦೦೦೧

•

ಮುಖಪುಟ : ಶಂಕರ ಪಾಟೀಲ

ಸಂಕ್ರಮಣ – ೬೩ ರಲ್ಲಿ

೫/ನಮ್ಮರಿಗೆ ನಮ್ಮರೀತಿಯಲ್ಲಿ/ಕವನ/ಕುವೆಂಪು

●

೮/ನಾನಲ್ಲ/ರೇಡಿಯೊ ನಾಟಕ/ಕೆ. ವಿ. ಕೆಂಪರಾಜೇಗೌಡ

●

೧೪/ಕಾಮ/ಕವನ/ಎಂ. ಸಿ. ವಸಂತಕುಮಾರ್

●

೧೫/ನನ್ನ ಕತೆ/ಕವನ/ಚಂದ್ರಶೇಖರ ತಾಳ್ಯ

●

೧೮/ಇಂಗ್ಲಂಡಿನಲ್ಲೊಬ್ಬ ಇಂಡಿಯನ್/ನೆನಪು/ಚಂ. ಪಾಟೀಲ

●

೩೧/ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಕ್ರಾಂತಿ/ಪ್ರತಿಕ್ರಿಯೆ
/ಮಾಧವ ಮಹಿಷಿ

●

೩೮/ಎರಡು ಕೋಣೆಗಳಲ್ಲಿ ಕನಸು/ಕವನ/ಜಿ. ಎಸ್. ಅವಧಾನಿ

●

೩೯/ಇಂದಿನ ಶಿಕ್ಷಣ-ನಿರುದ್ಯೋಗ-ಬಡತನ/ವಿಶ್ಲೇಷಣೆ
/ರಾಜಶೇಖರ ನೀರಮಾನ್ವಿ

●

೫೩/ನಾಲ್ಕು 'ಮಿನಿ'ಕವನಗಳು/ಟಿ. ಜಿ. ಭಟ್ಟ

●

೫೫/ಎರಡು ಕವನಗಳು/ಶಶಿಕಲಾ ದೇಶಪಾಂಡೆ

●

೫೮/ಬೆಕೆಟ/ನಾಟಕ ಪರಿಚಯ/ಗೌರೀಶ ಕಾಯ್ಕಿಣಿ

●

೬೪/ಒಂದು ಕ್ಷಣ/ಕವನ/ಬಿ. ಫಕೀರಗೌಡ

ಸಂಕ್ರಮಣ – ೬೩ ರ ಬರಹಗಾರರು

ಕುವೆಂಪು (ಡಾ. ಕೆ. ವಿ. ಪುಟ್ಟಪ್ಪ)
ಉದಯರವಿ, ವಿ. ವಿ. ಮೊಹಲ್ಲ, ಮೈಸೂರು–೨
ಕೆ. ವಿ. ಕೆಂಪರಾಜೇಗೌಡ
ಮ. ನಂ. ೩೩/೩, ವಿನೋಬ ರೋಡ್, ಜಯಲಕ್ಷ್ಮಿಪುರಂ, ಮೈಸೂರು–೧೨
ಎಂ. ಸಿ. ವಸಂತಕುಮಾರ್
ಕುಲಪತಿಗಳ ಆಪ್ತ ಕಾರ್ಯದರ್ಶಿ, ಕ್ರಾಫರ್ಡ ಭವನ, ಮೈಸೂರು–೫
ಚಂದ್ರಶೇಖರ ತಾಳ್ಯ
ತತ್ವಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬
ಚಂದ್ರಶೇಖರ ಪಾಟೀಲ
ಇಂಗ್ಲಿಷ್ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩
ಮಾಧವ ಮಹಿಷಿ
ಸಹಸಂಪಾದಕರು, 'ಕಸ್ತೂರಿ' ಡೈಜೆಸ್ಟ್, ಹುಬ್ಬಳ್ಳಿ
ಜಿ. ಎಸ್. ಅವಧಾನಿ
ಶಿಕ್ಷಕರು, ಎಸ್. ಕೆ. ಟಿ. ಹೈಸ್ಕೂಲ, ಉಪ್ಪಿನಪಟ್ಟನಟಕಲ್ಲ
ರಾಜಶೇಖರ ನೀರಮಾನ್ವಿ
ಜಿಯಾಲಜಿ ಪ್ರಾಧ್ಯಾಪಕರು, ವೀರಶೈವ ಕಾಲೇಜು, ಬಳ್ಳಾರಿ–೨
ಟಿ. ಜಿ. ಭಟ್ಟ
ಸ್ನಾತಕೋತ್ತರ ಇಂಗ್ಲಿಷ್ ವಿದ್ಯಾರ್ಥಿ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೩
ಶಶಿಕಲಾ ದೇಶಪಾಂಡೆ
c/o ಕೆ. ಶಿವಕುಮಾರ್, ಕೆಸೂರು, ಯಳಂದೂರು ತಾಲೂಕು,
ಮೈಸೂರು ಜಿಲ್ಲೆ
ಗೌರೀಶ ಕಾಯ್ಕಿಣಿ
ಪತ್ರಕರ್ತರು, ಗೋಕರ್ಣ (ಉ. ಕ.)
ಬಿ. ಫಕೀರಗೌಡ
ಶ್ರೀ ನೀಲಕಂಠಮಠ, ಹುಬ್ಬಳ್ಳಿ–೨೪.

ಕುವೆಂಪು

ನವ್ಯರಿಗೆ ನವ್ಯರೀತಿಯಲ್ಲಿ

೧

ಕೋಪಕ್ಕಿಂತಲೂ ಹೆಚ್ಚಾಗಿ ನಿಮ್ಮ
ಕನಿಕರಕ್ಕೆ ಅರ್ಹರಾಗಿದ್ದಾರೆ ಈ ಮಠಾಧಿಪತಿಗಳು,
ತಾವಿರುವ ಕತ್ತಲೆಯನ್ನೆ ಬೆಳಕೆಂದು ಭ್ರಮಿಸಿ
ಬೆಳಕಿಗೆ ಬರಲು ಅಂಜುತ್ತಿದಾರೆ,
ಒಂದು ಜಾತಿಯ ಕಬ್ಬಕ್ಕಿಗಳಂತೆ !
ಹಳೆಯ ಹಿಂದಿನ ಕುಬ್ಜಚೇತನರಾಗಿದ್ದ
ಸ್ವಾರ್ಥ ಆಚಾರ್ಯನಾಮಕ ಪಂಡಿತರನ್ನೆ
ಅವರ ಸಂಸ್ಕೃತ ಸರ್ಕಸ್ಸಿಗೆ ಡಂಗುಬಡಿದು
ದ್ರಷ್ಟಾರರೆಂದು ಮೋಸ ಹೋಗಿದ್ದಾರೆ !

೨

ಇವರು ಬೆಪ್ಪರೆಂದು ಮೋಸ ಹೋಗದಿರಿ:
ಬುದ್ಧಿವಂತರೆ ಅವರು.
ಸತ್ಯವನ್ನೊಪ್ಪಿದರೆ ತಮ್ಮ ಸುಖಕ್ಕೆ
ಎಲ್ಲಿ ಬರುವುದೊ ಧಕ್ಕೆ
ಎಂದು
ಹಿಂದಣ ಆ ಮಾನಸ ವ್ಯೈಗಳ್ಳರ ನೇತೃತ್ವದಲ್ಲಿ
ತಮ್ಮ ಮತ್ತು ತಮ್ಮವರ ಕೂಳ್ಬೊಗಕ್ಕೆ
ಪೆರರ ಸಂಪತ್ತನೀಳ್ಕುಳಿಗೊಳುತ್ತಿಹರಷ್ಟೆ !
ಬೃಂದಾವನವ ರಚಿಸಿ ಸುಳ್ಳುಕತೆಗಳ ಕಟ್ಟಿ
ಮತದ ಗಾಳಕೆ ಮೌಢ್ಯದೆರೆಯನು ಚುಚ್ಚಿ

ಭಕ್ತಿ ತೌಡನಂ ತಳಿಯಂತೆಳಿತಟಂ ಮಾಡಿ
ಮೂಢ ಬುದ್ಧಿಯ ಶೂದ್ರ ಮೂರ್ಖಗಳನು ಹಿಡಿದು
ತಮ್ಮ ಔತಣಕೆ ಬೇಳ್ವೆ ಮಾಡುವರಲ್ತೆ ?

೩

ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ,
ಶ್ರೀ ಅರವಿಂದ, ಮಹಾತ್ಮಾ ಗಾಂಧಿ,
ಮಾರ್ಕ್ಸ್, ಲೆನಿನ್
ಇವರೆಲ್ಲ ಬಂದ ಮೇಲೆಯೂ
ಈ ಹಳೆಯ ಗೂಬೆಗಳು ಕಣ್ದೆರೆಯುವಲ್ಲಾ ?
ಕೋಪಕ್ಕಿಂತಲೂ ಮಿಗಿಲು ಕನಿಕರಕ್ಕೇ
ಅರ್ಹರಯ್ಯಾ ಈ ಮಠಾಧಿಪತಿಗಳು !

೨೪–೫–೧೯೭೪

■ ■ ■

ಕೆ. ವಿ. ಕೆಂಪರಾಜೇಗೌಡ

ನಾನಲ್ಲ

ರೇಡಿಯೊ ನಾಟಕ

ಪಾತ್ರಗಳು :

ಒಬ್ಬ
ಧ್ವನಿ
ಅವನು
ಅವಳು

ನಿಶ್ಶಬ್ದ. ಸಮುದ್ರಬಂಡೆಗಪ್ಪಳಿಸುವ ಶಬ್ದ. ಗಾಳಿಶಬ್ದ. ಹಾರಿಕೂಗಿ ಕೊಂಡು ಕಣ್ಮರೆಯಾಗುತ್ತಿರುವ ವಿವಿಧ ಪಕ್ಷಿಗಳ ಧ್ವನಿ. ಮೌನ.

ಧ್ವನಿ : ನಾನು.... ನಾನು ಮಾತಾಡಲ್ಲ. ಆದರೆ.... ಬಾಯಿ ತೆರೆದುಕೊಳ್ಳುತ್ತೆ. ನಾನು.... ನಾನು ಮಹತ್ವದ ಕೆಲಸ.... ಕೆಲಸದಲ್ಲಿ ತೊಡಗಿದ್ದೇನೆ.... ಏನನ್ನೂ ಮಾಡದೆ. i do not like noise, unless i make it myself. ನಾನ್ಯಾರು.... ಹೌದು ನಾನ್ಯಾರೆಂದು ನಿಮಗೆ ಗೊತ್ತು. Ainsoph. ಹೌದಾ [ಮೌನ] Amen. ನಾನೇ ಗಂಡು ನಾನೇ ಹೆಣ್ಣು. ನನ್ನ ಭ್ರೂಣದಲ್ಲಿ.... ಭ್ರೂಣದಲ್ಲಿ ಜನ್ಮ ಪಡೆದಂದಿನಿಂದ, ಅಲ್ಲೇ.... ಗೋರಿ ಕಟ್ಟಲು ತೊಡಗಿದ್ದೇನೆ. ಗೋರಿ.... ಕಟ್ಟುತ್ತಲೇ ಇದ್ದೇನೆ.... ಇಂದಿನವರೆಗೂ.... ಇಂದಿನಂತೆ. [ಮೌನ] you see, one must learn to be bored. ಹ.... ನಾನು ಇದ್ದೆ. ಇದ್ದೇನೆ. ಇಲ್ಲವಾಗುವ ಶ್ರಮ ದುರ್ಬಲವಾಗಿದೆ. ಆದ್ದರಿಂದ ನಿಮ್ಮನ್ನ.... ಸೃಷ್ಟಿಸಿದೆ. ಜೀವಂತವಾಗಿದ್ದೀರ. [ಮೌವ] ನೀವು ನನ್ನನ್ನ ಅರ್ಥಮಾಡಿಕೊಳ್ಳಲೆಂದು.... ಅಂದರೆ.... ನೀವು ನೀವೇ....

ನಾನು ನಾನೇ. ನೀವು ಸಂಪೂರ್ಣ ನಿಮಂಗರ್ಥವಾದಾಗ, ನಾನು ಮತ್ತೆ ಗೋರಿ ಭ್ರೂಣವನ್ನ ಸೇರಿಬಿಡುತ್ತೇನೆ, ಇರುತ್ತೇನೆ. ನೆನಪಲ್ಲಿಡಿ.... ನೀವು ನೀವೇ.... ನೀವು ನಾನು.... ನಾನು ನಾನೇ.... ನಾನು ನಾನಲ್ಲ.... ಏನೂ ಅಲ್ಲ. [ಮೌನ] ಹೀಗೇಕೆ ? ಏನೆಂಬ ಪ್ರಶ್ನೆ ಕೇಳಬೇಡಿ. ಬಲವಾದ ಕಾರಣವಿದೆ. ಪ್ರಶ್ನೆಗೆ ಇಲ್ಲಿ.... ನಿಮ್ಮಲ್ಲಿ.... ಪ್ರಶ್ನೆಗೆ ನಿಜವಾದ ಉತ್ತರ ಸುಳ್ಳು. ಹೌದು ಸುಳ್ಳು. Much matter of a wooden platter. ನೀವು ಸತ್ತಲ್ಲದೆ ನಾನುಭ್ರೂಣ ಸೇರುವುದಸಾಧ್ಯ. Blasphemy against the holy ghost. ನೀವು ಒಂದು ಗಂಡು ಒಂದು ಹೆಣ್ಣಾಗಿದ್ದೀರ.... ಅಂದರೆ, ಅರ್ದ ಹೆಣ್ಣು ಅರ್ದ ಗಂಡು. ಅಂದರೆ, ಸುಲಭದಲ್ಲಿ ಅರ್ದ ನಾರೀಶ್ವರನಂತಿದ್ದೀರ. ಹೌದು.... ಬದುಕಿದ್ದೀರ. ನಾನು ಹೇಳಿದಂತೆ ಕೇಳಿ ನಾಟಕವಾಡಿದ್ದೀರ. ಆದರೆ, ಈಗ ಇಲ್ಲಿ.... ಇಲ್ಲಿ ನೋಡು.... ಹೌದು ನಿನ್ನನ್ನೇ.... ನನ್ನನ್ನೇ.... ನಿನ್ನ ಹೆಸರು.... ಹ.... ಮಿಸ್ಟರ್ Hamm [ಮೌನ] ಸೊ. ಹ. ಇನ್ನೆಷ್ಟೊ. ನೀ ಬರೆದಿದ್ದ 'ರಥ ಮತ್ತು ಎತ್ತು'.... ಏನದು ?.... ಹ. ಕವಿತೆ.... ಅದರರ್ಥ ಇಂದಾಗಿರಬೇಕು ಹೌದೆ ? [ಮೌನ] ಗುಡ್. ನೀನೆಷ್ಟು ಮುಗ್ಧ. ನಾನೇ ರಾಕ್ಷಸ [ಮೌನ] ನಿನ್ನ ಜೀವ, ಬುದ್ಧಿ ಎಲ್ಲಾ ನನ್ನಲ್ಲಿದೆ ಅಥವ.... ನನ್ನ ಹತ್ತಿರವಿದೆ. ನಂಬು ಅಥವಾ ಕ್ಷುಲ್ಲಕ ವೆನ್ನು, ನಿಜಕ್ಕೂ.... ನಾನೇಳಿದಷ್ಟನ್ನೇ ನೀ ಮಾಡುತ್ತಿರುವುದು. ನನ್ನಿಂದಲೇ ನೀನು ಬದುಕಿರುವುದು. ನಿಮ್ಮಿಂದಲೇ.... ನಾನೂ ಸಹ.... ಬದುಕಿರುವುದು. [ಮೌನ] ಅಂದಾಗೆ. ನಿನ್ನ ಗೆಳತಿಯ ಹೆಸರೇನೆಂದೆ ? [ಮೌನ] Nixie... Nixie... ಹ, ನಿನ್ನ ಮೂಳೆಮಾಂಸದಿಂದ ಜನಿಸಿದವಳು. ಗುಡ್. ಅನ್ಯಳಲ್ಲಿ ಆಪ್ತಳು. ಅಗತ್ಯವಲ್ಲದನಿವಾರ್ಯದವಳು. ಹ.... ಗುಡ್. ನೋಡು.... ಬರಬರನಡೆ, ಒಡಿನಡೆ, ಸರಸರನಡೆ, ಅನಂತವಾಗಿ ಸತ್ತು ಬಿಡು. ಈ ಸಮುದ್ರ, ಆ ಬೆಟ್ಟಗಳಾಕರ್ಷಣೆಗೆ.... ಈ ಜೀವದಾತ್ಮದಣು Nixieಯನ್ನು ಮರೆತು, ಸೋಲದೆ, ಎಡವದೆ, ಬದುಕದೆ, ಮುನ್ನುಗ್ಗಿ

ಇದೆ. ಅನಂತವಾಗಿ ಸತ್ತುಬಿಡು.... ನನಗಾಗಿ. ಮೌನ ಕೇವಲ ನನಗಾಗಿ. ನಾನು ಸಾಯುತ್ತೇನೆ ಜೊತೆಜೊತೆ ನಿನಗಾಗಿ. ಸ್ಪಂದಿಸು.... ಆ, ಸಮುದ್ರ ಅಲೆಗಾಳಿ ಹೊತ್ತು ತರುತ್ತಿದೆ. ಬೆಟ್ಟ ಬಿಸಿಗಾಳಿ ಬೀಸುತ್ತಿದೆ. ಚಳಿಯಾಗಾಳಿಗಳ ಮಿಲನಗಳಿಂದ ಪಾರಾಗು, ದಿವ್ಯಲೋಕದ [ಮೌನ] ಬಿಡು ಮಾಡುವಾಗ, ನಾನು ನಾನಾಗದೆ ಛಿದ್ರಗೊಳ್ಳುತ್ತ ನಡೆಯುತ್ತಿದ್ದೇನೆ. ಇರುತ್ತೇನೆ. [ಮೌನ] ಯೋಚಿಸು.... ನನಗಾಗಿ ಬದುಕಿಗಾಗಿ, ಅನಂತವಾಗಿ, ವಿಶ್ರಾಂತಿಗಾಗಿ, ಪಿತಾಮಹರ ಬಗ್ಗೆ ಯೋಚಿಸು. ಹೌದು ನನಗಾಗಿ ಚಿಂತಿಸು [ಮೌನ] ಚಿಂತಿಸು.... ಚಿಂತಿಸು [ಸಮುದ್ರದ ಶಬ್ದ]. ಪ್ಲೀಸ್.... ಪ್ಲೀಸ್ ಯೋಚಿಸು.... ಯೋಚಿಸು. Hamm, i say little, but think more. [ಬಬ್ಬ ಬಂಡೆಯಿಂದಿಳಿಯುವಾಗ ಶೂ ಶಬ್ದ. ಅತನ ಹಿಂದೆ ಅವಳು ಇಳಿಯುತ್ತಾ]

ಅವಳು : ಸೊ.... ಸೊ.... ಯಾಕೆ ? ಯಾಕ್ಹೀಗೆ.... ಕ್ಷಣದಲ್ಲಿ ಬೇಸರ ವಾಗುತ್ತೀಯ? [ಮೌನ. ಸಮುದ್ರದ ಶಬ್ದ] ಇತ್ತ ನೋಡು [ಮೌನ] ಈ ಮುತ್ತನ್ನಿಡು.... ತಗೊ.... Hamm... ತಗೊ.

ಬಬ್ಬ : ಬೇಡಬೇಡ ನಿನ್ನ ದೇಹವನ್ನ ನನ್ನ ತಪೋವನ ಹತ್ತಿರಕ್ಕೆ ತರಬೇಡ. ನಾನು.... ನಾನು ನಿದ್ರೆ ಮಾಡುವಾಗ.... ನಿನ್ನ ಮೋಹಿನಿಯಾದ ಕದ್ದು ಬೇಟೆದಾದರೂ ಏಕೆ? ಹಣ್ಣು ತಿನ್ನೆಂದು ತಿನ್ನಿಸಿ ನನ್ನಾಕರ್ಷಿಸಿ ದಾದ್ದರೂ ಏಕೆ? ನಿನ್ನ.... ತುಟಿಗಳಲ್ಲಿವೆ ಮುತ್ತನಿತ್ತದ್ದು. ನಾನು.... ನಾನು ಛಿದ್ರವಾಗಿ.... ಪಂಜರವಾಗಿ.... ಪ್ರೈಲಿಗೆ....

ಅವಳು : ಸೊ.... Hamm. ಬೇಡ, ಈ ತುಟಿಗಳತ್ತ ನೀನಿಲ್ಲದಿದ್ದರೆ ಬೇಡ. ಈ ದೇಹ.... ಈ ದೇಹ ನಿನ್ನದೆಂದೆಯಲ್ಲ.... ಬಾ ನನ್ನನ್ನ ನಿನ್ನಲ್ಲಿ ಕರಗಿಸಿಬಿಡು ಎಂದೂ.... ಬದುಕದಂತೆ.

ಬಬ್ಬ : Nixie, A little lie helps the truth to go up and up. ನಿನ್ನ ಮಾತಾಕಿ ಮಾತು ಬರೀ ನಿಜ್ಜ. ಅನುಭವಿಸಿದ್ದೇನೆ, ನಿನ್ನ ಬೆಳದಿಂಗಳ್ಲು. ನಿನ್ನನ್ನ ಕರಗಿಸುವ ಬದಲಿಗೆ.... ಅಪ್ಪಿ ಹಿಡಿದಾಗ ನಿನ್ನ ನರನಾಡಿಗಳೆಲ್ಲ ಮಂಜಾಗಿ ನೀರಾಗಿ ಕರಗಿ

ಬಿಡುತ್ತೇನೆ, ನಂತರ ಕ್ಷುಲ್ಲಕವಾಗಿ ಬಿಡುತ್ತೇನೆ. ಹೌದು ಕ್ಷುಲ್ಲಕ ವಾಗಿ ಬಿಡುತ್ತೇನೆ. ಹೌದು ಕ್ಷುಲ್ಲಕವಾಗಿ ಬಿಡುತ್ತೇನೆ. Nixie ಈ ಸಮುದ್ರ ನೀನೆನ್ನುವುದ ಬಲ್ಲೆ. [ಮೌನ] ಹೌದೂ.... ಸ್ಮಶಾನ ದಿಂದ ನಾನು.... ಇಲ್ಲಿಗ್ಹೇಗೆ ಬಂದೆ ? ಎಲ್ಲದಕ್ಕೂ ನೀನೇ ಕಾರಣ. ಭೂಮಿಯಲ್ಲಿ ಹಾಕಿದ 'ಬೆಂಕಿಯ ತಬ್ಬಿ ಬೇಂದುಬಿಡಬೇಕೆಂದಾಗ.... ನನ್ನಾತ್ಮದಲಿ ಅಬ್ರಹಾಮ್ ಇದ್ದಾಗ.... ಆ ದಿನ ಬೆಟ್ಟದಲ್ಲಿ.... ಬೆಟ್ಟದಲ್ಲಿ ನನ್ನ.... ನನ್ನ ಮಗ್ಗುಲಿಂದ ಟಗಮ್ಮ ಪೆಣ್ಣು.... ಹೆಣ್ಣ ಸೃಷ್ಟಿಸಿ ನಾನು.... ನಾನು ಮೈಥುನದಲ್ಲಿಡಗಲು.... ಮಗುವಂತಾ ಗಲು.... ಲೀನವಾಗಿ ಬಿಡಲು ಹೆಣಗಿದಾಗ ನೀನು.... ನೀನು ಕಿರುಚಿ ಕೊಂಡು ಮೂರ್ಛೆಯಾಗಿ.... ದುರ್ಬಲನನ್ನಾಗಿಸಿ ಸೆಳೆದುಬಿಟ್ಟೆ, ಸೆಳೆದುಬಿಟ್ಟೆ. ಹೌದು ನೀನು.... ಕೆಡಿಸಿ, ಎಲ್ಲಾ ಕೆಡಿಸಿಬಿಟ್ಟೆ. ಅನಂತವಾಗಿ ಬದುಕುವುದ ತ್ಯಜಿಸಿ.... ನನ್ನಿಂದ ದೂರಾಗಿ.... ಕಣ್ಮರೆಯಾಗಿಬಿಟ್ಟೆ. ಸಿಕ್ಕಸಿಕ್ಕವರಲ್ಲಿ ಇಣುಕಿದೆ, ಅಡ್ಡಾಡಿದೆ, ಸೀರ ಗಾಸಿ ಬೆತ್ತಲೆ ಮೈ ನೀಡಿ ಶಾಖ ಕೊಟ್ಟೆ, ಸೂರ್ಯಶಾಖ ಕೊಟ್ಟೆ. ಆದರಿಂದು.... ನಿನಗೊಂದು ಮಗುವಾಗಲಿಲ್ಲ. ಈ ಪವಿತ್ರ ಪಟ್ಟಣ ದಲ್ಲಿ ಅವರೆಲ್ಲ ಸತ್ತಿದ್ದಾರೆ. ನನ್ನನ್ನ ಹುಚ್ಚನೆಂದವರೆಲ್ಲಾ ಸತ್ತಿದ್ದಾರೆ. ಎಲ್ಲರೂ ಸತ್ತಿದ್ದಾರೆ. ಸ್ವರ್ಗವನ್ನ ಮೆಚ್ಚಿದವರೆಲ್ಲ ಸತ್ತಿದ್ದಾರೆ. ಈಗ ನೋಣವೂ ಇಲ್ಲ. [ನಗು] ನನ್ನ ಸ್ನೇಹಿತನ ವಿನಹ.

ಅವಳು : ಆದರೆ.... ಒಮ್ಮೆ....

ಒಬ್ಬ : ಹೌದು.... ಒಮ್ಮೆ, ಕೇವಲ ಒಮ್ಮೆ. ಹಿಂದೆ ಬಹಳ ಹಿಂದೆ.... ಆದರೆ ನನ್ನ ವಿನಹ ನಿನ್ನ ಸಾವು ಖಂಡಿತ [ನಕ್ಕು] ನನಗೆ ಗೊತ್ತಿದೆ Nixie, ಗೊತ್ತಿದೆ, ಎಲ್ಲರೂ ಹುಟ್ಟಿ ಕತ್ತೆ ಎಂದಾಗ ಬದುಕ ಬೇಕೆಂಬುದರ ಅರ್ಥ [ಗಟ್ಟಿಯಾಗಿ ನಕ್ಕು] ಹೌದು, ಹೌದು. ನಿನಗೆ ಬೇಕಾಗಿರುವುದು ಒಂದು ಮಗು. ಆದರೂ ಹೇಳುತ್ತೇನೆ, ಹೇಳುತ್ತಲೇ ಇರುತ್ತೇನೆ, ಬದುಕಿಗಾಗಿ ನಿನಗಾಗಿ ಮಗುವನ್ನ.... ಮುಗ್ಧ ಶಿಶುವನ್ನ ಇಲ್ಲಿಗರ್ಪಿಸುವುದಿಲ್ಲ. ಈ ಪೃಥ್ವಿಗರ್ಪಿಸುವುದಿಲ್ಲ.

ಇಲ್ಲ, ಖಂಡಿತ ಇಲ್ಲ. Nixie, ನಾನು ಬದುಕಿಗಾಗಿ ಬದುಕುತ್ತಿಲ್ಲ. ನಿನಗಾಗಿ.... ಸತ್ತವರಿಗಾಗಿ ಬದುಕುತ್ತಿಲ್ಲ, ಸಾವಿಗಾಗಿ ಬದುಕುತ್ತಿದ್ದೇನೆ. ಆದರೆ, ನೀನು ನನ್ನನ್ನ ನಿನಗಾಗಿ ಬದುಕಿಗಾಗಿ ಬದುಕಿಸಲು ಹಾತೊರೆಯಬೇಡ. ಇನ್ನೊಬ್ಬ ವ್ಯಕ್ತಿ ಪೀಟರ್ ಇದ್ದಾನೆಂದು ವ್ಯವಹಾರ ಪಡಬೇಡ. ಆತ ನನಗಂಟಿಕೊಂಡಿದ್ದಾನೆ. ಅನಿವಾರ್ಯದಿಂದಲ್ಲ. ಆಪ್ತತೆಯಿಂದಲ್ಲ, ನೆಪಕಲ್ಲ, ನಿನಗಾಗಲ್ಲ.... ಅವನ ಕಣ್ಣಲ್ಲಿ ನನ್ನಸ್ತಿತ್ವವಿರುವುದರಿಂದ. ಹೌದು ಆತ ನಾನಾಗಲೂ ಹೆಣಗುತ್ತಿದ್ದಾನೆ. Nixie, i hate my friends well, but myself better. ನೀನು ದೇವರಿಗೆ ಸಂಗಾತಿಯಾಗಿ ತೋಡಿದ ಉಪ್ಪು ಬಾವಿಯ ನೀರನ್ನ ನಾನೆಂದೂ.... ಕುಡಿಯುವುದಿಲ್ಲ. ಕುಡಿಯುವವನಲ್ಲ.

ಅವಳು : Hamm, ನೀನು ಉದ್ರೇಕಗೊಂಡಂತೆ ಭಾಸವಾಗುತ್ತೆ. ಹಿಂದಿನದನ್ನ ಮರೆತುಬಿಡು. ಸತ್ತವರನ್ನ ಚರಿತ್ರೆಯನ್ನ ಮರೆತುಬಿಡು, ಮುಗ್ಧನಾಗು. ಚರಿತ್ರೆಯ ಪುಟ ನಾನು.... ನೀನು. ನೋಡು.... ಈ ಕ್ಷಣದಿಂದ ನಿನ್ನ ಹಿಂದಿನ ಅರಿವಿನಂತೆ ಬೆಟ್ಟ ಹತ್ತೋಣ, ಹಣ್ಣುಗಳನ್ನ ಸೃಷ್ಟಿಸಿ ಲೀನವಾಗಿ ಬಿಡೋಣ, ಬೆತ್ತಲಾಗೋಣ ಅನಂತ ಅಪ್ಪಿಕೊಂಡು ಮಲಗಿಬಿಡೋಣ. ತಗೊ [ಮೌನ] ಈ ಕುಪ್ಪಸ.... ಈ ವಸ್ತ್ರಗಳನ್ನೆಲ್ಲ ತಗೊ. ಎಲ್ಲವನ್ನೂ ತಗೊ. [ಮೌನ. ಬಟ್ಟೆ ಹರಿದು ಬಿಸಾಡುವ ಶಬ್ದ] ನೋಡು.... ಇತ್ತ ತಿರುಗು.... ಈ ನನ್ನ ಬೆತ್ತಲನ್ನ ನೋಡು.... ಅಸತ್ಯವಲ್ಲ ಸಮುದ್ರದಂತಿದೆ, ಜ್ಞಾನವಿದೆ, ಸತ್ಯ ಹೀಗಿದೆ. ನೊ.... ನೋಡು.... ಪ್ಲೀಸ್ ಒಂದೇ ಬಾರಿ.... ಕೊನೆಯಬಾರಿ ಈ ಬೆತ್ತಲನ್ನ ನೋಡು, ಭೇದಿಸಿ ವಿಶ್ಲೇಷಿಸಿ ಅರ್ಥಮಾಡಿಕೊ. ಸತ್ಯವನ್ನ ಅರಿತುಕೊ. ನೊ. ಇತ್ತ ಮಲಗು. ನೋಡು.... [ಮೌನ. ಸಮುದ್ರದ ಸದ್ದು]

ಒಬ್ಬ : Nixie, ಈ ನಿನ್ನ ಬೆತ್ತಲಲ್ಲಿ ಸಮುದ್ರವಿದೆ. ನಿಜ. ಸಮುದ್ರದಲ್ಲಿ ಸತ್ತ ಇಡೀ.... ಮನುಷ್ಯಜೀವಿಗಳು ವಿಲವಿಲ ಸಾಯುತ್ತಿದ್ದಾರೆ. ಅವರವರ ಜ್ಞಾನದ ಶ್ವಾಸ ಹೀರುತ್ತಾ, ತಮ್ಮನ್ನೇ ಕಬಳಿಸಿಕೊಳ್ಳುತ್ತಾ.

ನಿನ್ನೀ ಬೆತ್ತಲಲ್ಲಿ ಸತ್ಯ.... ಸ್ಪಷ್ಟವಾಗಿದೆ. ನನಗೆ ಎಲ್ಲವೂ ಅರಿವಾಗುತ್ತಿದೆ. ನೀನು ನನಗೀಗ ಅನ್ಯಳು. ಹಿಂದಿನಂತೆ ನೀನು ನನ್ನ ಪಾಂಸವಾಗಿ ಮೋಹಿನಿಯಾಗಿ ಮುಗ್ಧತನದಿಂದ ಮಲಗಿದ್ದಾಗ ನನ್ನಲ್ಲಿ ಸೇರಿಕೊಳ್ಳಲಾಗದವಳು. ಅನ್ಯಳು. ಪ್ರಾಜ್ಞೆಯಲ್ಲ. ಸತ್ಯ ನಿನ್ನಲಿಲ್ಲವೆಂಬುದ ಬಲ್ಲೆ. Nixie ನಾನು ಮತ್ತೆ ನಾನಾಗಬೇಕು, ಮುಗ್ಧನಾಗಿ ಬಿಡಬೇಕು. ಆತ್ಮ ಹಾವಾಗಿ ಹಣ್ಣು ತಂದರೂ.... ಜೀವತಂದರೂ.... ಮಲಗೇ ಇರಬೇಕು, ಅನಂತವಾಗಿ ಸತ್ತು.... ಸತ್ತು.... ಸತ್ತು. ಛೆ.... ನಿನ್ನ ನಿರಾಕರಿಸುವುದಕ್ಕೆ ಈ ಪದಗಳು ದುರ್ಬಲವಾದಂತೆ ಕಾಣುತ್ತೆ. ಏನು.... ಹೇಗೆ?.... ಹೇಗೆ?....

ಅವಳು : ಸೊ.... ಇಲ್ಲಿನೋಡು.... ನನ್ನಪ್ಪಿಕೊ.... ಎಲ್ಲಾ.... ಎಲ್ಲಾ ಸರಿಯಾಗಿಬಿಡುತ್ತೆ. [ಮೌನ] ತಗೋ. ಈ ಬಾಳೆಹಣ್ಣನ್ನ.... ಈ ಮೀನನ್ನ ತಿನ್ನು. ತಗೊ.

ಒಬ್ಬ : ಬೇಡ ಬೇಡ. ಈಗ ಅಭ್ಯಾಸವಿಲ್ಲ.

ಅವಳು : ಏಕೆ ? ಏಕೆ ? ಹಿಂದೆ.... ಹಿಂದೆ ಅಷ್ಟೊಂದು ತಿನ್ನುತ್ತಿದ್ದೆ.

ಒಬ್ಬ : ಹಿಂದೆ ಹಿಂದೆ.... ಬಹಳ ಹಿಂದೆ.... ಹೌದು ಅನಂತವಾಗುವ ಇಚ್ಛೆ ಇದ್ದಾಗ.... ಆದರೀಗ ಅನಂತತೆ ಬೇಕಾಗಿಲ್ಲ.... ಬೇಕಾಗಿಲ್ಲ.

ಅವಳು : ನಿನ್ನ ಟೊಪ್ಪಿ ತೆಗೆದು ನೋಡು. ಈ ನಗ್ನ ಶರೀರವನ್ನು ನೋಡು.

ಒಬ್ಬ : ಹೀನ, ಟೊಪ್ಪಿ ! [ಸವರಿ ನಡುಗಿದ ಧ್ವನಿಯಲ್ಲಿ] ಟೊಪ್ಪಿ ?! ಹಿಂದೆ.... ಹಿಂದೆ ನೀನು ಕಿತ್ತೊಗೆದ ಟೊಪ್ಪಿಗೆಗೆ ಕಷ್ಟಪಟ್ಟು ಈ.... ಈ.... ಈ ಟೊಪ್ಪಿ ಕೊಂಡಿದ್ದೇನೆ. ಇಲ್ಲ ಇಲ್ಲ.... ಈ ಟೊಪ್ಪಿ ನಾನೇ ನಾನೇ ತಯಾರಿಸಿದ್ದು.... ಸೃಷ್ಟಿಸಿದ್ದು. ಈ ಜನ್ಮದಲ್ಲಿ ಟೊಪ್ಪಿ ಎತ್ತಿ ನಾನು ಮರ್ಯಾದೆ ನೀಡಲ್ಲ. ಅರ್ಥವಾಯ್ತು. Never, never, i will dance to every fool's pipe. yes pipe. Fools... pipe... My hat... HAT !

ಧ್ವನಿ : ಮಿಸ್ಟರ್ Hamm. ನಿಧಾನ, ನಿಧಾನ.... ಪ್ರಯತ್ನಪಡು ನಿನಗಾಗಿ ನನಗಾಗಿ. ಹೌದು ಪ್ರಯತ್ನಪಡು.... ಯತ್ನಿಸು [ಮೌನ] Hamm,

ಆದಿನ.... ಹೌದು, ಆ ದಿನ.... ನನಗೆ ತಲೆ ಕೆಡತೊಡಗಿ.... ತಲೆ ಸೂರ್ಯನಂತಾಗಿ.... ಬದುಕಿನ ಬಿರುಕು ಕದಂಕವಾಗಿ ಕತ್ತಿ.... ಕತ್ತಿಯು ಮೊನೆಯಾದಾಗ.... ಅಯ್ಯೋ.... ಈ ಬದುಕಿಂದ ನನಗೆಂದು ಮುಕ್ತಿ ? ಈ ಬದುಕಲ್ಲಿ ಸಾವು ಏಕೆ ಜೀವಂತವಾಗಿಲ್ಲ ? ಇಲ್ಲಿ ಇಲ್ಲಿ ಬದುಕು.... ನಿಧಾನ ಕಬಳಿಸುತ್ತಿದೆ. ಬಸುರಿ ಶಿಶುವನ್ನ ಭ್ರೂಣ ದಿಂದಾಚೆ ತಳ್ಳುತ್ತಿದ್ದಾಳೆ.... ಎಂದೆನಿಸಿ.... ಅಯ್ಯೋ.... ಒಮ್ಮೆಲೇ ಕಬಳಿಸಿ ನನ್ನೆದೆಗೆ ಕೊಚ್ಚಿ ಬದುಕಿಗರ್ಥ ಹಚ್ಚಲು ಬಿಡಬಾರದೆ ? ಇಲ್ಲಿ ಇಲ್ಲಿ ಬದುಕು ನನ್ನಪ್ಪಿಕೊಂಡಂತೆಲ್ಲ ನಾನು ನಿರಾಸಕ್ತ.... ನಿರ್ಲಿಪ್ತ .... ನಿರ್ವೀರ್ಯನಾಗುತ್ತಿದ್ದೇನೆ.... ಎಂದೆನಿಸಿದಾಗ, ಅಂಗೈಯಲ್ಲಿ ಮುಖ ಮುಚ್ಚಿಕೊಂಡಿದ್ದೆ. ವಿನಾಕಾರಣ ತಲೆ ಕೆದರಿಕೊಂಡು ಗಸಗಸ ಉಜ್ಜಿ ಗೋಡೆಗೆ ಘಟ್ಟಿಸಿಕೊಂಡು, ಕಣ್ಣಿನ ಪಿಸುರೆ ತೆರೆದಿದ್ದೆ, ಮೂಗಿನ ಮುಸುರೆ ಸ್ವಷ್ಟ ಮಾಡಿದ್ದೆ. ಮೂಗಿನ ಹಿಂಬಾಗದ ಎರಡು ಹುಬ್ಬಿನ ನಡುವೆ ಎಡಗೈಯ ಐದು ಬೆರಳನ್ನ ಹೆಣೆದಿಟ್ಟಾಗ, ಹಣೆ ಸುಕ್ಕುಗಟ್ಟಿ ಮೂಗು ಉಬ್ಬಿತ್ತು. ಕಣ್ಣು ಮುಚ್ಚಿದಾಗ ಯೋಚನೆ ಚಂಚಲೆಯಾಗಟ್ಟಿದ್ದಳು. ಆದೇ ದಿನ.... ಸೊ. ಆದೇ ದಿನ ಯಾರಾದರೂ ನನ್ನೆದುಕೊಂಡಪ್ಪಿ ಒಪ್ಪಿಕೊಳ್ಳ ಬಾರದೆ ? ಇಂದು ಹಾಗೆಂದುಕೊಂಡ.... ಆದಿನ.... ಸೊ.... ಆ ದಿನ.... ನಾನು ಹೇಗೆ ... ಹೇಗೆ Hamm... Hamm...

ಒಬ್ಬ : Nixie, ಆದಿನ. ಹೌದು, ಚಂಚಲೆಯನ್ನಪ್ಪಿಕೊಂಡ, ನನ್ನಪ್ಪಿ ಕೊಂಡ ನೀನು ಮರು ಭೂಮಿಯಲ್ಲಿ ಕೈಬಿಟ್ಟು ಬಿಟ್ಟ ದಿನ. ಕೋಣೆ ಯಲ್ಲಿ ತುಂಬಾ ಸಿಗರೇಟಿಚ್ಚಿ ಕೆಮ್ಮುತ್ತ.... ಉದ್ವೇಗದಲಿ [ಹತ್ತು ವರ್ಷದಿಂದೆ ಒಬ್ಬ ಉದ್ವೇಗದಲ್ಲಿದ್ದಾಗಿನ ಧ್ವನಿಯಲ್ಲಿ] ಓ ಹುಡುಗಿ, ನಿನ್ನ ಶಿಗಳೆಂದ್ರ ಳಿಸಿ.. ದೂರವಾಗಿಸಿ.... ಕ್ರೂರ ರೋಗಗ್ರಸ್ತೆ ಬಾಲೆ ಜರ್ಜರಕೊಂಡು ಹೃದಯ ಹುಚ್ಚು ತಾಯೇ.... ಹುಚ್ಚು ಹುಚ್ಚ ನ್ನಾದ್ಧ.... ಹುಚ್ಚು ಹುಚ್ಚು ನನ್ನ ಬದುಕಲ್ಲಿ. ಈ ತುಕ್ಕಿಡಿದ ಹೃದಯ ಕೊಂಡಿಪ್ಪು ಹಾವರಸ ಸುರಿದು ಪ್ರೇಮದ ಸಿನ್ನಾಸರೆ ಬಾಕ ಸೀಡಿ ನಿನ್ನ ಬದುಕ ಸುತ್ತಿಗೆಯಿಂದಪ್ಪಳಿಸಿ ನನ್ನಲೊಂದಿಪ್ಪು ಬದುಕ

2)

ಹೆಚ್ಚು.... ಹುಚ್ಚು ಬದುಕ ನನ್ನಲ್ಲೂ ಹೆಚ್ಚು. [ಮೌನ] ಹುಡುಗಿ, ಹೆಣ್ಣೆ, ನಿನ್ನ ಉಬ್ಬರವಿಳಿತದಲೆಗಳಂತಿರುವ ಆ ಮಾಂಸದಾಣ.... ಕೆಣಕಾಟದಲ್ಲಡಗಬೇಕು. ಬತ್ತಲಾಗಿಸಿ ಬತ್ತಲಾಗಿ ನಿನ್ನಪ್ಪಿ ಅನಂತ ಮಲಗಿ ಬಿಡಬೇಕು. ನಿನ್ನ ಸಾವು ಬದುಕು ಉಯ್ಯಾಲೆಯಲ್ಲಿ ನಾನು ಮಗುವಾಗಬೇಕು. ಹೆಣ್ಣೆ.... ಹುಡುಗಿ.... ಸೂರ್ಯ ನೀರನ್ನಾಕರ್ಷಿಸುವಂತೆ, ಹೂವಿನ ಸುವಾಸನೆ ದುಂಬಿಯನ್ನಾಕರ್ಷಿಸುವಂತೆ ನನ್ನಾಕರ್ಷಿಸು. ಮನ್ಮಥ ತಾತ ತಂದೆ ಮಗ ಮಗಳು ತಾಯಿ ಅಜ್ಜಿಯರ ಜೀವದಣುವಾಗಿ ಬದುಕು ತಾನಾಗಿ ಬಿರುಕು ಬಿರುಕನ್ನೆಲ್ಲಾ ತುಂಬಿದಂತೆ, ನನ್ನ ರಕ್ತದ ಕಣಕಣದಲ್ಲಿ ನನ್ನಸ್ತಿತ್ವ ವ್ಯಕ್ತಿತ್ವದ ಬದುಕಲ್ಲಿ ಶ್ವಾಸ ಅನ್ನ ಶಕ್ತಿ ವೀರ್ಯದಲ್ಲಿ ಪಾರ್ವತಿಯಾಗಿ ದಮನಿಗಳಲ್ಲಿ ದನಿಗಳಲ್ಲಿ ಅಂತರಂಗ ಬಹಿರಂಗಗಳಲ್ಲೆಲ್ಲ ತುಂಬಿ ತುಳುಕಾಡುತ್ತ ಕುಣಿದಾಡು ನೃತ್ಯಮಾಡು ನನ್ನನ್ನೇ ಕಬಳಿಸಿಬಿಡು.... ಆಹಾರವಾಗುತ್ತೇನೆ ಜೀರ್ಣಿಸಿಕೊ, ರಕ್ತ ರಜಸ್ಸಾಗುತ್ತೇನೆ.... ನಿನ್ನಾವರಿಸಿ ಖುಶಿಯಿಂದ ಮಗುವಾಗಿ ಭ್ರೂಣವನ್ನೇ ಸಮಾಧಿ ಎಂದರಿತು ಅನಂತವಾಗಿ ನಿದ್ರಿಸುತ್ತೇನೆ. ಎಂದಾದರೂ ಭಾರವೆಂದು ಭ್ರೂಣದಿಂದೆನ್ನ ತಳ್ಳಿಬಿಡಬೇಡ.... ನನ್ನವ್ವ ವರ್ತಿಸಿದಂತೆ. ಹುಡುಗಿ.... ನೀ ನಿಜಕ್ಕೂ ತಳ್ಳಿಬಿಟ್ಟೆಯೋ.... ನನ್ನವ್ವ ನನ್ನ ದ್ವೇಷಿಸಿದವರೂ ಸರಿ.... ಛಿದ್ರವಾದ ಆತ್ಮದಣುಗಳ ಬೆಸುಗೆಗೆ ಶ್ರಮಪಡುವೆ.... ಪಟ್ಟು ಕೊಲ್ಲುತ್ತೇನೆ.... ಅನಂತವಾಗಿ ಸತ್ತುಬಿಡುತ್ತೇನೆ. ನನ್ನ ಜೀವಿಸುತ್ತೆ. [ಹೊರಗಿನ ಧ್ವನಿಯಲ್ಲಿ] Nixie, ಅವನ ಲಿಸ್ಕಹುಡುಗಿ ಅಪ್ಪಳಾಗರ್ಜಿಸಿ ದಮನಿಗಳಲ್ಲಿ ಲಬಲಬ ಬಡಿದು ಕೆಣಕಬೇಕು, ಇದ್ದ ಬೇಸರವನ್ನ ಬೇಯಿಸಿ ಕುಡಿಸಿ ಘರ್ಷಣೆಯಂ ಕನಲಿಸಿ ಬದುಕ ಚರ್ಮಕ್ಕ ಹೊಂದಿಸಬೇಕು, ಬೇಕು ಅಗತ್ಯಬೇಕು, ಅನಿವಾರ್ಯಬೇಕು, ಬೇಕೇ ಬೇಕು.... ಅಂದು ಕೊಂಡಿದ್ದೆ. [ಮೌನ] ಹೇಗಾದರಾಗಲಿ ಬದುಕು ನನ್ನ ರಕ್ತವಾಗಬೇಕು. ಇನ್ನಾದರೂ ಬದುಕಬೇಕು, ಬದುಕಲೇಬೇಕು.... ಅಂದುಕೊಂಡಿದ್ದಾಗಲೂ.... ಯಾರೂ ಕೈ ಹಿಡಿದು ಹೆಜ್ಜೆಗೆಜ್ಜೆ ಹಾಕಿ ಶರೀರಕ್ಕೆ ಶರೀರ ಬೆಸೆದು

ಘನ್ರ ಆತ್ಮಗಳ ಶಾಂತಿಗೆ ಹಾತೊರೆಯುತ್ತಿಲ್ಲ. ನಾನು ಆ ಪರ್ಸ್ಯೂರಸ್ ಕಡೆ. ಕಂಡಿಗಳಲ್ಲಿ ಇಣುಕುವ ಹಾವಾದೆ. ಕೊನೆಗೆ ನಾಲ್ವತ್ತು ಬೆಳಿಗ್ಗೆ ರಾತ್ರಿ ಸಂಪೂರ್ಣ ಕಷ್ಟಪಟ್ಟೆ. ಇಷ್ಟೆಲ್ಲ ನಿನಗಾಗಿ ಮಾಡ ಲಿಲ್ಲ. ನಿಜ—ಆದರೆ ನನ್ನ ವಿಸ್ಮೃತಿಯಲ್ಲಿ ಎಂದೂ ನೀ ನೆಲೆಸಿದ್ದು ನಿಜ. ಇಂದೂ, ಮುಂದೆಯೂ ಸಾಯುವವರೆಗೆ, ನಿನ್ನ ನೆನಪು ನನ್ನಲ್ಲಿ.... ನನ್ನಲ್ಲಿ ನನ್ನಸ್ತಿತ್ವವಿದ್ದಂತೆ. ದುಃಖ ನನ್ನ ನೆರಳಿದ್ದಂತೆ ನೀನು ನನ್ನ ಸಾವಿಗೆ ಕಾರಣ ನನ್ನವ್ವಳಂತೆ. ನಾನು ಪ್ರೇಮಿ ಸುತ್ತೇನೆನ್ನುವುದಿಲ್ಲ. ಕಾರಣ, ನಾನು ಅವರೆಲ್ಲರಂತಲ್ಲ. ನಾನು ಪ್ರೇಮವನ್ನು ನಂಬುವವನಲ್ಲ. ಈ ಆತ್ಮದಾವು.... ಹಣ್ಣು.... ಇವೆಲ್ಲದರಂತೆ.... ಪ್ರೇಮದಂತೆ, ಎಲ್ಲವೂ ಕೇವಲ ನೆಪವೆಂದು ಅರಿತುಕೊಂಡಿದ್ದೇನೆ. ಸತ್ಯವನ್ನ ನನ್ನ ದೃಷ್ಟಿಯಲ್ಲಿ ಅರ್ಥಮಾಡಿ ಕೊಂಡಿದ್ದೇನೆ. ನಿನ್ನನ್ನ ದೇವರನ್ನ ಸೃಷ್ಟಿಯನ್ನು ಬೇಕೆಂದೇ ನಿರಾಕರಿಸುತ್ತಿಲ್ಲ. ಬಹುಶಃ ಇವೆಲ್ಲ ನನಗೆ ರುಚಿಸುವುದಿಲ್ಲ. ನನಗಾಗಿ ಇವೆಲ್ಲ.... ಬೇಡ.

ಧ್ವನಿ : ನನಗೆ ನನ್ನಸ್ತಿತ್ವವೇ.... ಸಾವೇ.... ಸ್ನೇಹಿತನಂತೆ.... ತಾಯಿಯ ಬಂಜೆಘರ್ಭದಂತೆ ಕಾಣುತ್ತೆ. ಬೇಕೆಂದೇ ನಾನು ಸಾಯಲಿಚ್ಛಿಸುತ್ತಿಲ್ಲ.

ಒಬ್ಬ : ಆತ್ಮ ಹಾವಾಗಿ ನಿನ್ನ ಕಾಪಾಡಿದ್ದರೆ.... ನೀನು ನನ್ನ ಹಿಂಸಿಸದಿದ್ದಲ್ಲಿ.... ಈ ನಾನು ಇರುತ್ತಿರಲಿಲ್ಲ.... ಈ ನೀನು ಇರುತ್ತಿರಲಿಲ್ಲ. ನಾವು ನಾವು ಇಲ್ಲದಿರುವಾಗ....

ಧ್ವನಿ : ನಾನು ಆರಾಮ ನನ್ನ ಗೋರಿಘರ್ಭದಲ್ಲಿ ಮಲಗಿರುತ್ತಿದ್ದೆ, ಹಿಂಸೆ ಯಿಲ್ಲದೆ, ಹಾಯಾಗಿ.

ಒಬ್ಬ : ಬಹುಶಃ ನಾನು ನಾನಲ್ಲ, ನನ್ನ ವರ್ಣನೆ ಬುದ್ಧಿಗೆಲ್ಲ ಅಂಜಮಾನ ಇರುವಂತೆ, ಆತ ನಿರೀಕ್ಷಿಸಿದಂತೆ ಭಾಸವಾಗುತ್ತೆ. ಈ ದೇವರು ಆತ್ಮ [illegible] ನನಗೆಂದೂ [illegible] ಸಿಕ್ಕುತ್ತಿಲ್ಲ. [illegible] [illegible] ನನ್ನ ಬಿಟ್ಟು ಹುಟ್ಟಿದ್ದು ನಾನು ನನಗಾಗಿ ನಾನಾಗಿ ಅಲ್ಲ. ಸಾಯುವುದು ನನ್ನಿಚ್ಛೆಯಲ್ಲ.... ಎನಿಸುತ್ತೆ. ಆದರೆ,

ಈ ಭೂಮಿಯಲ್ಲಿ ಹುಟ್ಟಿದ್ದರಿಂದ ಸಾಯುವ ಪ್ರಯತ್ನವನ್ನಷ್ಟೇ ಮಾಡುತ್ತಿರುತ್ತೇನೆ. ಇಂದಿನಂತೆ ಬಹುಶಃ ಸತ್ತಾಗ ಸಹ ಏನೇನೂ ಖುಶಿ ಅನ್ನಿಸುವುದಿಲ್ಲ. [ಮೌನ] Nixie. ನೀನು ಎಲ್ಲರನ್ನೂ.... ಅಂದರೆ, ಮುಗ್ಧರನ್ನ ಹಾಳು ಮಾಡಿದ್ದೀಯಾ. ಒಟ್ಟಿನಲ್ಲಿ ಎಲ್ಲರೂ ಬದುಕಿದ್ದರೂ ಸತ್ತದ್ದು ನಿನ್ನಿಂದ. ನಿನ್ನದು ಪಾಪವೆಂದು ಹೇಳುತ್ತಿಲ್ಲ. ಪಾಪವಿರುವಲ್ಲಿ ನೀನು ಪಾಪಿಯೆಂದು, ನೀನು ಸತ್ಯವಂತ ನೆನ್ನುವುದು, ಪೆದ್ದತನ. [ಮೌನ] Nixie, ಯೋಚಿಸಿನೋಡು. ನಿಜಕ್ಕೂ.... ನನ್ನಗತ್ಯ ನಿನಗಿದೆಯೆ? ಸಾಯಬೇಕೆನಿಸುವುದಿಲ್ಲವೆ? ಹ.... ಜ್ಞಾಪಕವಿಡು.... ನಿನ್ನೀ ನಗ್ನತೆಗೂ ನಾನು ಸ್ಪಂದಿಸಿಲ್ಲ ವೆಂಬುದನ್ನ. [ಮೌನ]

ಧ್ವನಿ : ಸೊ. ಗುಡ್. ನೋಡು.... Nixie ನಿನ್ನ ಕನ್ನಡಿಯ ಕಣ್ಣನ್ನ.... ಕಣ್ಣಲ್ಲಿ ಕಾಣುವ ತನ್ನಬಿಂಬವನ್ನ ಮರೆತು.... ತನ್ನೀ ನೆಲವನ್ನೇ ನೋಡುತ್ತಿದ್ದಾಳೆ. ನೆಲ ಕನ್ನಡಿಯಲ್ಲವೆಂಬುದನ್ನ ಇನ್ನೂ ಕಲಿತಂತೆ ಕಾಣುವುದಿಲ್ಲ. [ನಕ್ಕು] ಪಾಪ. ಅಗಮ್ಯ ಎಷ್ಟು ಮುಗ್ಧಳಂತೆ ಪಾಪಿಯಂತೆ ಕಾಣುತ್ತಿದ್ದಾಳೆ. ನೋಡು.... ನೋಡು [ನಕ್ಕು] ಈ ಸಮುದ್ರ ಸಹ ಎಷ್ಟು ಶಾಂತವಾಯ್ತು ಸತ್ತಂತೆ. ಇಲ್ಲ ಇಲ್ಲ ಇಬ್ಬರೂ ಜೀವಂತವಾಗಿದ್ದಾರೆ. ನೋಡು ಮತ್ತದೇ ಶ್ವಾಸದ ಎದೆಯ ಉಬ್ಬರವಿಳಿತ. ನಕ್ಷತ್ರದಾಕಣ್ಣುಗಳನ್ನ ನೋಡು.... ಕಾಡು ಬೆಟ್ಟ ಪ್ರಕೃತಿಯೆಲ್ಲ.... ಹೌದು ಎಲ್ಲ.... ಅವಳಾ ದೇಹದಲ್ಲಡಗಿ ಬಿಟ್ಟಿದೆ. ಹೌದು ಜೀವ ಅವಳಲ್ಲಿದೆ. ಆತ್ಮಗತ್ಯವಾದ ಸಾವಿಲ್ಲ. ನಿಮ್ಮಂತೆ ಮನುಷ್ಯ ಎಲ್ಲಾ ಕಲಿಯುತ್ತಾನೆ. ಸಾವಿನ ವಿಷಯದಲ್ಲಿ ಅಷ್ಟಟಿ ಮುಗ್ಧ. [ನಗು] ನೋಡು ನನ್ನಲ್ಲಿ ಬದುಕಿನ ಸಾವಿದೆ ಏನೆಲ್ಲ ಇದೆ. ಆದರೆ, ಏನೂ ಇಲ್ಲದ ಸೊನ್ನೆಯಂತೆ. [ಮೌನ, ದೂರ ದಿಂದ Hamm, Hamm, ಎಂದು ಕೂಗುತ್ತ 'ಅವನ' ಧ್ವನಿ ಹತ್ತಿರವಾಗುತ್ತೆ. ಮರಳಲ್ಲಿ ನಡೆಯುವ ಶಬ್ದ. ಸಮುದ್ರಶಬ್ದ]

ಅವನು : ಹಲೋ Hamm, ಹಲೋ Nixie.

ಒಬ್ಬ : Nixie! ನಿನಗೆ ಗೊತ್ತೇನು?

ಅವನು : ಎಸ್

ಒಬ್ಬ : ಹೇಗೆ ?

ಅವನು : ಮಾಮೂಲು, ಪ್ರಕೃತಿ ನಿಯಮ.

ಒಬ್ಬ : ಅಂದರೆ ?

ಅವನು : Oh... Hamm... ಮೇಕೆಮರಿಯಂತೆ ಅಲೆದಾಡುತ್ತಿದ್ದಳು.

ಒಬ್ಬ : ನೀನು ಕಜ್ಜಿನಾಯಿಯಂತೆ ಒಂದೆ ಅಡ್ಡಾಡಿದೆ, ಅಲ್ವ ? ಅಥವಾ she looked on you as a cow on a bastard calf.

ಅವನು : Yes. Exactly... Like a cow on a bastard calf. [ಮೌನ] ಆದರೆ, ನಿನ್ನ ನೆನಪಿನ ದಾರಿಯಲ್ಲಿ ಬರುವಾಗ nixie ಸಿಕ್ಕಿ ಒಂದು ಮಗು ಬೇಕೆಂದಳು. ನಾನು ಹೌಹಾರಿದೆ. ಥಟ್ಟನೆ ನನ್ನ ನೆರಳಾದಳು. ನನ್ನ ಬೆಟ್ಟ ಹತ್ತಬೇಕೆನ್ನುವಷ್ಟರಲ್ಲಿ ಕೈ ಹಿಡಿದು ಜಗ್ಗಿದಳು.

ಒಬ್ಬ : ನಿನ್ನ ಮೈ ನರನಾಡಿಗಳಲ್ಲೆಲ್ಲ ಮಿಂಚು ಹರಿದಂತಾಯ್ತು.

ಅವನು : Exactly. ನಂತರ ನಿಧಾನ ವಸ್ತ್ರ ಕಿತ್ತೆಸೆದು ಬೆತ್ತಲಾಗಿ ಕೇವಲ ಒಂದು ಬಾರಿಯ ಮೈಥುನ ಸಾಕೆಂದಳು. ಆ ಅವಳ ನಗ್ನ ಶರೀರ.... ಆಹಾ....

ಧ್ವನಿ : ಪ್ರಕೃತಿಯಂತಿತ್ತು

ಒಬ್ಬ : ಅನಿವರ್ಚನೀಯವಾಗಿತ್ತು

ಅವನು : ಹೌದು.... ಅಲ್ಲ ಅಲ್ಲ.... ಏನೋ ಒಂಥರ.

ಒಬ್ಬ : ಸಂಪೂರ್ಣ ಶಿಶ್ನ ಉನ್ಮಾದ. ಪ್ರಪಂಚರಕ್ತ ನಿಮ್ಮನ್ನಾವರಿಸಿತ್ತು.

ಅವನು : ಹೌದು. ನಾನು ನಗ್ನನಾದೆ. ಮುಂದೆ ಪ್ರಜ್ಞೆ ಬಂದಾಗ ಕಗ್ಗತ್ತಲಾವರಿಸಿತ್ತು. Nixie ಕಣ್ಮರೆಯಾಗಿದ್ದಳು. [ಮೌನ] ಆದರೀಗ... ನೀನು ಅವಳು.... ಬಲತ್ಕಾರ....

[illegible] : My friend, she is a... cockatrice. [illegible]
[illegible]

ಅವನು : [illegible] Nixie [illegible] Nixie [illegible]

ಅವಳು : [illegible]

ಅವನು : [illegible]

ಅವಳು : [illegible] Hamm. [illegible]

[illegible] : [illegible]

[illegible] : oh... Shut up Hamm. [illegible] Hamm, [illegible] Like a clown [illegible] Love me... Love my god. [illegible]

ಅಪ್ಪಿಕೊ [ಮೌನ ಸಮುದ್ರದ ದೀರ್ಘನಿಪ್ಪಳ] ಪೀಟರ್ No ಪೀಟರ್ ಬೇಡವಿಲ್ಲಿ.... ಈ ಎರಡು ಸಮುದ್ರ ಸೇರುವಲ್ಲಿ. ಈ ಸತ್ತ Hamm ನಿಂತಲ್ಲಿ ಸ್ಮಶಾನ ಸ್ಮಶಾನ ಏರುವಲ್ಲಿ ದೇವರಿಲ್ಲ.... ಬದುಕಿಲ್ಲ.... ಸೊಬಗಿಲ್ಲ.... ಋತುಗಳಿಲ್ಲ.... ಬಾ, ದೂರ ದೂರ ಬಹು ದೂರದಲ್ಲಿ.... ಸಮುದ್ರದ ಪಕ್ಕದ ಹಚ್ಚ ಸಿರ ಬಯಲಲ್ಲಿ.... ಈ ರಾತ್ರಿ ಮನೆ ಕಟ್ಟುವ ಪೀಟರ್, ಈ ರಾತ್ರಿ ಜೀವಿಗಳ ರಾತ್ರಿ ಆತ್ಮಗಳ ರಾತ್ರಿ ಪೀಟರ್ ಬಾ. ನನ್ನೊಡನೆ ಸಮುದ್ರದಲ್ಲಿ ಈಜಾಡು ಬಾ. ಈ ಬದುಕಲ್ಲಿ ನೀನು ನಾನಾಗು ಬಾ, ಮಗುವಾಗು ಬಾ. [ಮೌನ] Here's a kiss to all those that love them, that love those that love them that love those that love us [ಮೌನ] ಬಿಡು ನನ್ನ ಪೀಟರ್.... ಬಿಡು let me go [ಸಮುದ್ರದ ದೀರ್ಘಮೊರೆತದೊಡನೆ ಅವನ ಧ್ವನಿ]

ಅವನು : Hethra... Nixie Hethra... ನಿಲ್ಲು ಬಂದೆ.... ನಾ ಬಂದೆ. [ಮೌನ] Hamm, ಬದುಕೆಲ್ಲ ಖಾಲಿ ಖಾಲಿ ಎಂದೆಯಲ್ಲ, ಈ ರೋಮಾಂಚನ, ಈ ಘರ್ಷಣೆ, ಈ ಪ್ರಕೃತಿ ಸೌಂದರ್ಯ, ಇವೆಲ್ಲ ಏನು? ಬದುಕು ಖಾಲಿ ಇರಬಹುದು, ಅದನ್ನ ತುಂಬಿಕೊಳ್ಳುವುದು ಕರ್ತವ್ಯ. ಇಲ್ಲ ಇಲ್ಲ, Hamm, ನೀನು ಹುಚ್ಚ. ನಾನು ಬದುಕಬೇಕು. ಅವಳಲ್ಲಿ ನಾನು ಅನಂತವಾಗಿಬಿಡಬೇಕು. ಇಲ್ಲಿ ನಾನು ಸಾಯುವುದಿಲ್ಲ. ಬದುಕಿಗಾಗಿ ಬದುಕುತ್ತೇನೆ. [ಮೌನ] Nixie, ನಾ ಬಂದೆ. ನಾನು Chiron ಅರ್ಧವಾಯ್ತು Chiron. ಬದುಕು ಖಾಲಿಯಲ್ಲ, ಸೂರ್ಯ ಸತ್ತಿಲ್ಲ, ನೊ. ನಾನು ಸಾಯುವುದಿಲ್ಲ.

ಒಬ್ಬ : ಪೀಟರ್, i wish you breath, i wish you death. i wish you happiness galore, i wish you Hell when you die, what could i wish you more ? My friends... ಮತ್ತೊಮ್ಮೆ ನೀನು ವಾಪಸಾಗುತ್ತೀಯೆಂದು ಬಲ್ಲೆ ಪೀಟರ್. ನೋಡು ದಡದಲ್ಲಿ ಮೊಸಳೆಗಳು ಎಷ್ಟು ಮುಗ್ಧವಾಗಿ ತೆವಳುತ್ತಿವೆ ಆಪಿನತ್ತಿರಕ್ಕೆ. ನೀನೀಗ Abel. ನಾನು ನಿನಗಾಗಿ

ಸಾವಿನಂತೆ ಕಾಯುತ್ತಿರುತ್ತೇನೆ. ನೀನೀಗ ಬದುಕುವುದು ನಿನಗಾಗಿಯಲ್ಲ. ಇನ್ನು ಮುಂದೆ ಸಾಯುವುದೂ ನೀನು ನಿನಗಾಗಿಯಲ್ಲ. ಪೀಟರ್, i will not pull the thorn out of your head and put it into my own. ಪೀಟರ್., on the door to earth it says: push and pull. But all men row galley way. good bye, ಪೀಟರ್.

ಆವನು : [ಕೂಗುತ್ತಾ ಓಡುವ ಶಬ್ದ] Nixie... Hethra... i am coming... i am... com.... in.... a.

[ದೀರ್ಘ ಮೌನ. ಸಮುದ್ರದಲ್ಲಿ ಭಯಂಕರ ಸಪ್ಪಳದ ಕ್ಷಣಗಳು. ಮೌನ]

ಧ್ವನಿ : ಹೋದರು, ಹೋದವರು ಹೊರಟೇ ಹೋದರು, ಎರಡು ತಲೆ ಹಾವಿನ ದೋಣಿಯಂತೆ ಸಮುದ್ರದಡಿಗೆ, ಮತ್ತೆ ಮತ್ತೆ ಹುಟ್ಟಿ ಸಾಯಲು, oh.... ನೋ.... don't worry, they'll come again as good yer's pigs did- [ಮೌನ] the serpent dahaka. she'll make him dance without a pipe. [ಮೌನ] ಸಮಯದಿಕ್ಕಟಿನಲಿ ಪದ ಸಹ ಕ್ಷುಲ್ಲಕವೆನಿಸುತ್ತೆ. Hamm, ಬೇಸರದಲಿ ಜಡ್ಡುಡಿದು ಕುಳಿತಾಗ ರೋಮ ಸಹ ಆಕಳಿಸುತ್ತೆ. [ತಡೆದು] ಕೊನೆಯ ಪ್ರಯತ್ನ ಮುಖ್ಯ ಮೌನ. [ಆಡುಗಳು ಹಿಂಸೆಯಿಂದ ಕೂಗಿಕೊಳ್ಳುವ ದ್ವನಿ. ನೀರಿಗೆ ದೊಪ್ಪನೆ ಬಿದ್ದು ಕ್ಷಣ ಸೆಣಸಾಡುವ ಒದರುವ ವಿಚಿತ್ರ ಕಿರುಚಾಟ. ಮೌನ] Hamm, ಇಲ್ಲಿ ಎಲ್ಲರೂ ತಮ್ಮ ಸ್ವಾರ್ಥಕ್ಕೆ ಸುಳ್ಳನ್ನ ನಿಜಮಾಡಿ, ನಿಜವನ್ನ ಸುಳ್ಳನ್ನಾಗಿಸಿ ತಾವು ಗೆಲ್ಲಲು ವಿಷಯ ಸಮರ್ಥಿಸಿಕೊಳ್ಳುತ್ತಾರೆ, ವಾದಗೆಲ್ಲುತ್ತಾರೆ. ಎಲ್ಲಾ ಜೊಳ್ಳಾಗಿ ಸುಳ್ಳಾಗಿ ಸಾವು ಆತ್ಮೀಯವಾಗಿ ನನಗೆ ಕಂಡಂತೆ, ಅವರವರ ವಿಷಯ ಅವರವರಿಗೆ ಮಹತ್ವವಾಗುತ್ತೆ. [ಮೌನ] ಹೌದು ಇಲ್ಲಿಂದ ಸೃಷ್ಟಿಯಿಂದ ಜಗತ್ತಿಂದ ಜನರಿಂದ ದೇವರಿಂದ ದೂರ ಬಹುದೂರ ಅಗಮ್ಯ ಬಂಜೆ ಘ್ರಾಣ

ದಲ್ಲಡಗಿ ಕೊಳೆತು ನಾರಿ ಹೆಪ್ಪು ನೀರಾಗಿ, ನೀರು ಆವಿಯಾಗಿ, ಮತೆ ಆವಿ ನೀರಾಗದಂತೆ ಸಾವನ್ನಪ್ಪಬೇಕು, ನಿನ್ನಂತೆ ನಾನೂ ಸಹ. ಹೊರಬರಲಾಗದ ಕಪ್ಪಿಡಿದು ಶೂನ್ಯ ಕಾಣುವ ಭೂಮಿ ಕಾಣದ ಜನ ಕಾಣದ ಬದುಕು ಕಾಣದ ಕಣ್ಮರೆಯಾದ ಕಂದಕದಲ್ಲಿ ನನ್ನ ನಿನ್ನ ಸಾವು ಜೀವಿಸಬೇಕು. ಚಕ್ಷು ಪ್ರೇಮ ಕಾಮ ಸೋಂಮಂಗಳಿಂದೇಳುವ ಅಮಲಿಗಿಂತಭಿರುಚಿಪಡೆದ ಬದುಕಿಗೆ ಮತ್ತ್ಯವಕಾಶದಾಸ್ಪದವೀಯು ದಮಲಿನ ಸಾವಪ್ಪಬೇಕು. ಹೌದು ನಿನ್ನ ನನ್ನ ಸಾವು ಅನಂತವಾಗ ಬೇಕು, ಬದುಕಬೇಕು. Arid ಸೊ. Arid. do you know Hamm, who never climbed, never fell. ಸೊ. ನನ್ನಲ್ಲಿ ಒಂದಾಗು ಬಾ. ನಿನ್ನಾ ಪ್ಲೇಟ್ಟ ಮುಖದೊಡನೆ, ನಿನ್ನಾ ಬೆಂಡಾದ ಕಾಲನ್ನ ಆರಾಮ ಎಸೆಯುತ್ತ ಇಗ್ಗಳಿಸಿ ನೀ ನಡೆದು ಬರುವಾಗ ಬೇಸರದಲ್ಲೂ ನಾನು ನಗುತ್ತೇನೆ, ನಕ್ಕಿದ್ದೇನೆ. ನೀನು ನನಗೆ ಖುಷಿ ಕೊಟ್ಟಿರುವೆ, ನಾನು ನಿನಗೆ ಸಂಗಾತಿಯಾಗಿರುವೆ. ಬಾ ಸೊ ಬಾ, ಇಲ್ಲಿಗೆ, ನಾ ಕುಳಿತಲ್ಲಿಗೆ. ಸತ್ತ Nixie ಯನ್ನ ಹೊತ್ತುತಾ. ಇಬ್ಬರನ್ನು ಒಪ್ಪಿ ಅಪ್ಪಿ ಬಚ್ಚಿಟ್ಟುಕೊಳ್ಳುವೆ. [ಮೌನ] ಯಾರ ಸಂಗಗಳು ಬೇಡ, ಬೇಡ, ಬದುಕು ಬೇಡ. [ಶೂ ಶಬ್ದದೊಡನೆ ಒಬ್ಬ ಮತ್ತೆ ಬಂದೆ ಹತ್ತಿಬಂದ ಶಬ್ದ] ಹ.... ಬನ್ನಿ ನನ್ನಲ್ಲಿ ಬೆರೆತು ಬಿಡಿ. ರಾತ್ರಿ ಬಹಳವಾಯ್ತು. ನೀವು ಮಲಗಿ, ನಾನು ಪದ ಜೋಡಿಸುತ್ತೇನೆ, ಲಾಲಿ ಹಾಡುತ್ತೇನೆ. [ಮೌನ] ಸ್ನೇಹಿತ ಪೀಟರ್ ಈ ಸಮುದ್ರದಲಲ್ಲವೆ ಸತ್ತದ್ದು. ಆತ ಸತ್ತದ್ದು ಮತ್ತೆ ಹುಟ್ಟಲು. ಅನಂತವಾಗಿ ಸಾಯಬೇಕು.... ಅಂದಿದ್ದವ, ಬದುಕಿದ್ದವ, ಏಕೆ ಆತ್ಮಹತ್ಯೆ ಮಾಡಿಕೊಂಡನೆಂಬುದ ಬಲ್ಲೆ. ಪೀಟರ್, ನಿನ್ನ ನೆನಪಿನ ಕಲ್ಪನೆಯಲ್ಲಿ ಸಂಜೆ ರಾತ್ರಿಯಾಗಿದೆ. ನೀನು ಸತ್ತಿಲ್ಲ. ಈ ಅನಂತ ಸಮುದ್ರದಲ್ಲಿ ಕಣ್ಮರೆಯಾದ ನಿನ್ನಾ ಕಳೇಬರ ಹುಡುಕುತ್ತಿದ್ದೇನೆ, ಹುಡುಕುತ್ತಲೇ ಇರುತ್ತೇನೆ, ನನ್ನಾ ಆತ್ಮೀಯ ಸಾವಿನಂತೆ. all void and nothing else. ಶೂನ್ಯದ ಜೊತೆಗೆ ಮಾತಾಡ-ದವ, ಏನನ್ನೂ ತಿಳಿಯಲಾರ. the silent man is the best

to listen to. ಮುಗ್ಧನಾಗಿದ್ದುಬಿಡುವುದೇ ಜೀವನ. [ಸಕ್ಕ್ಯ ಮೌನ] ಅರ್ಧನಾರೀಶ್ವರ ಮಲಗಲು ಹವಣಿಸುತ್ತಿದ್ದಾನೆ. ಪೀಟರ್ ನೆನಪಿನಲ್ಲಿಡು. ನಾನು ನಿನ್ನನ್ನ ಹುಡುಕುತ್ತಿದ್ದೇನೆ. ನೀ ಸತ್ತಿಲ್ಲ.... ಅಂದುಕೊಂಡರೂ. ಹೌದು, ನಾನು ಅಲ್ಲ ನನ್ನನ್ನ.... ನಾನು.... ನಾನು.... ಹುಡುಕುತ್ತಿದ್ದೇನೆ. ನಾನು.... ನಿನ್ನನ್ನ.... ನಾನು.... ನನ್ನನ್ನ.... ನಾನಲ್ಲಿ.... [ಸಮುದ್ರದ ದೀರ್ಘ ಮೊರೆತ. ನಿಶ್ಶಬ್ದ] Arrah.... the yes thtitta moments [ತಡೆದು] Anan.... [ಮೌನ, ಸಮುದ್ರ. ಮೌನ]

ಎಂ. ಸಿ. ವಸಂತಕುಮಾರ್

■

ಕಾಮ

■ ■ ■

ಕಾಮ ಕಾಮನ ಬಿಲ್ಲು
ಮನರಂಗದಲಿ ನೂರು ನವಿಲಾಟ
ಬಯಕೆ ಗರುಡನ ಹರಿದಾಟದಲಿ ಇರಿವ ತೀಕ್ಷ್ಣನೋಟ
ಕಣ್ಣೆಂಜಲಿಗೆ ಮನದೆಂಜಲಿನ ಸೋಂಕು
ಜಗಜಾತ್ರೆಯಲ್ಲಿ ಆಸೆಯಂಗಡಿಸಾಲು
ರಂಗು ರಂಗಿನ ಮಾಲು
ಆದರೇನು........
ಇಚ್ಛಾಭಿಚ್ಛಗಳ ಸಂಕೋಲೆಯು ಬಾಳು
ನನ್ನಂತೆ ನಿನ್ನ ನಿನ್ನಂತೆ ನನ್ನ
ಎಲ್ಲರಲಿ ಇರುವ ಹಲವಾರು ಬಣ್ಣ
ಬಯಲಾಗದಂತೆ ಬಳಿದ ಭಯದ ಬಿಳಿಯ ಸುಣ್ಣ
ವಾಸ್ತವಕೆ ಧರ್ಮದ ಮುಳ್ಳುಬೇಲಿ ?
ಪ್ರಕೃತಿಗೆ ನೀತಿಯ ಕಲ್ಲುಕಟ್ಟೆ ?
ನಮಗಿಲ್ಲ ಮುಕ್ತಮಾರುಕಟ್ಟೆ !

■ ■ ■

ಚಂದ್ರಶೇಖರ ತಾಳ್ಯ

ನನ್ನ ಕತೆ

ಮತ್ತೆ ಬರೆಯುವ ಮತ್ತು ಮಾತಾಡುವ
ಹಕ್ಕಾಗಲಿ, ತಾಕತ್ತಾಗಲೀ ನನಗಿಲ್ಲ;
ನನ್ನ ಬಾಯಿಗೆ ಹುಳ ಬಿದ್ದ ದಿನದಿಂದ.
ತಲೆ ತುಂಬ ಗುಪ್ತರೋಗದ ಬಾಧೆ
ಈಗ ರಕ್ತದ ತುಂಬ ಅದೇ.

ಬಯಲಲ್ಲಿ ನಿಂತು ಕೂಗುತ್ತಿದ್ದೆ
ಎದೆ ತುಂಬ ಹಾಡುತ್ತಿದ್ದೆ
ಆಗ: ನನ್ನ ಗಂಡಸುತನದ ರೋಮ ಸೆಟೆಯುತ್ತಿದ್ದವು
ನನ್ನ ಮೈ ಮುಖವೆಲ್ಲ ಕೆಂಪಗೆ ಹೊಗರೊಡೆಯುತ್ತಿತ್ತು
ಸೂರ್ಯನಿಗೆ ಸಮ ಕಣ್ಣು ತಗಲಿಸಿ ನೇರ ಎದುರಿಸುತ್ತಿದ್ದೆ
ಇದ ಕಂಡ ಪುಷ್ಟ ಹುಡುಗಿಯರು ನನ್ನ ಭ್ರಮಿಸುತ್ತಿದ್ದರು.
ದಟ್ಟ ಕಾಡಿನ ತುಂಬ ಆಗ ಸುವಾಸನೆ ಬೀರುತ್ತಿತ್ತು

ನನ್ನ ಬೆವರು ನೆಕ್ಕಿದ ಹುಡುಗಿ
ದಿಟ್ಟೆ ಮತ್ತು ತುಂಟಿ
ಬೆಟ್ಟ ಹತ್ತಿಸಿ ಕೊಳಲು ನುಡಿಸಿದ್ದಳು.
ಹಸಿರು ಅಡವಿಯಲ್ಲಿ
ನನ್ನ ಕೈಚಳಕಕ್ಕೆ ಬೆಕ್ಕಸ ಬೆರಗಾಗಿದ್ದಳು.
ಮತ್ತು ನವಿರಾಗಿ ಕಂಪಿಸಿದ್ದಳು.

ಈಗ ಅವಳು ಹೆದರುತ್ತಾಳೆ
ನನ್ನ ನೆರಳಿಗೇ ನಡುಗುತ್ತಾಳೆ.

ಈಗ ನನ್ನ ಬಯಲೆಲ್ಲ ಲಕ್ಷ್ಮೀ ಬಜಾರದ ಗಲ್ಲಿ
ನನ್ನ ಕಾಡೆಲ್ಲ ಇರುಳು ಕಂದಕದ ದಟ್ಟ ಕಪ್ಪು
ಅಲ್ಲೀಗ ಬಣ್ಣಬದಲಾಯಿಸುವ ತೋಳಗಳು ಮಾತ್ರ ತಿರುಗುತ್ತವೆ.
ತಮ್ಮ ಫ್ರಾಕು ಸೀರೆಗಳಲ್ಲಿ
ಪೇಟೆ ಹೆಣ್ಣುಗಳು ನನ್ನ ಸುತ್ತ ಜೊಲ್ಲುಸುರಿಸುತ್ತಿವೆ.
ನರಗಳ ಬಿಗಿ ಬಂಧನದಲ್ಲಿ
ಕಟ್ಟು ಬಿಗಿದು ಬಿಸಾಕಿದ ಒಣಸೌದೆಯ ಪೆಂಡಿ
ನೆಕ್ಕಿ ಒದ್ದೆಮಾಡಿಕೊಳ್ಳುವುದಷ್ಟೆ ಈಗಿರುವ ಹಾದಿ.

ಒಮ್ಮೆ ಅರಚ ಬೇಕೆನಿಸುತ್ತೆ :
"ಈ ದೇಶದ ನನ್ನಂಥ ಪ್ರಾಮಾಣಿಕ ಪ್ರಜೆಗಳೇ"?
ಆದರೆ ನನ್ನ ಹಕ್ಕು ನಾನೇ ಕಬಳಿಸಿದ್ದೇನೆ.

ಆದ್ದರಿಂದ ಅದರ ವ್ಯಂಗ್ಯ ನನ್ನ ಕಿವುಚುತ್ತದೆ.

■ ■ ■

ಚಂದ್ರಶೇಖರ ಪಾಟೀಲ

ಇಂಗ್ಲಂಡಿನಲ್ಲೊಬ್ಬ ಇಂಡಿಯನ್

ನೆನಪುಗಳು

ಒಂದು ವಾರವಾಯಿತು, ಲಂಡನ್ ಏರ್‌ಪೋರ್ಟಿನಲ್ಲಿ ಇಳಿದಂದಿನಿಂದ. ಲೀಡ್ಸ್ ನಗರದ ಮೋರಿ ಮಾರಿಸ್ ವಸತಿ ಗೃಹದಲ್ಲಿ ನನ್ನ ಕೋಣೆ. ಬೆಚ್ಚಗಿನ, ಮಬ್ಬುಬೆಳಕಿನ ಕೋಣೆ. ಮನಸ್ಸು ಒಂದಕ್ಕೆ ಒಂದಕ್ಕೆ ಹೋಗುತ್ತದೆ. ಭಾರತದ ಕಡೆಗೆ. ಧಾರವಾಡದ ಕಡೆಗೆ. ಭುಂವ್ ಗುಟ್ಟುವ ಜಂಬೋ ವಿಮಾನದಲ್ಲಿ ಕುಳಿತು ಮುಂಬೈಯಿಂದ ಲಂಡನ್ನಿಗೆ ಹಾರಿಬಂದ ನಾನು ಬರಿ ನಕಾಶದಲ್ಲಿ ಮಾತ್ರ ನೋಡಿದ ದೇಶಗಳ ಮೇಲೆ ಹಾಯ್ದು ಬಂದೆ ಯುಗೋಸ್ಲಾವಿಯಾ, ಜರ್ಮನಿ, ಫ್ರಾನ್ಸ್.... ಅದೊಂದು ಕನಸು ಆದರೆ ಅದು ಸತ್ಯವೂ ಆಗಿತ್ತು. ಆದರೆ ಆಗ ಬೇಕಾದಷ್ಟು ಉದ್ರೇಕ ನನಗಾಗಿರಲಿಲ್ಲ.

ಬೆಳಗಾವಿಯಿಂದ ವಿಮಾನ ಮೇಲೇರಿದಾಗ ನಾನು ಕಿಡಕಿಯ ಮೂಲಕವೇ ನೋಡುತ್ತಿದ್ದೆ. ಹೆಂಡತಿ, ಮಕ್ಕಳು, ಅವ್ವ, ಅಪ್ಪ, ತಮ್ಮ, ತಂಗಿ, ಬಂಧು, ಬಳಗ. ಎಲ್ಲ ದುಂಡಗಿನ ಕಿಡಕಿಯಲ್ಲಿ ದೂರದ ಚಿತ್ರದಲ್ಲಿನ ನಿರ್ಜೀವ ಚಿತ್ರಗಳಂತೆ ಕಂಡರು. ಒಂದು ಕ್ಷಣ ಗಂಟಲು ತುಂಬಿಬಂತು. ಒಂದು ವರ್ಷಕಾಲ ಈ ಮುಖಗಳು ಬರಿ ಮನಸಿನಲ್ಲಿ. ಅಥವಾ ಕನಸಿನಲ್ಲಿ.

ವಿಮಾನ ಲಗ್ಜರಿ ಬಸ್ ಹಾಗೆ ಇತ್ತು. ೨೦–೨೫ ಜನ ಪ್ರಯಾಣಿಕರು. ಇಬ್ಬರು ವಿಮಾನ ಪರಿಚಾರಿಕೆಯರು. ಒಬ್ಬಳು ಚಂದ ಇದ್ದಳು. ಇನ್ನೊಬ್ಬಳು ಗುಂಡಗಿ. ಚಾಕಲೇಟು ಕೊಟ್ಟು ಹೋದವರು ಬ್ರ ಅನ್ನಲಿಲ್ಲ. ಕೆಳಗೆ ನೋಡಿದರೆ ಮೋಡಗಳ ರಾಶಿ. ಅದರ ಕೆಳಗೆ ಭೂಮಿ. ದಾರಿ, ಹಳ್ಳಗಳು ಗೆರೆ ಕೊರೆದಂತೆ. ಗೋಕಾಕರ 'ರಿಬ್ಬನ್ ರಸ್ತೆಗಳ' ನೆನಪು. ಅವರು ಇಂಥ ವಿಮಾನದಲ್ಲಿ ಕುಳಿತೇ ಕವಿತೆಯ ಮೇಲೆ ಕವಿತೆ ಬರೆದಂತೆ. ಮಹರಾಯ!

ಒಂದು ತಾಸಿನಲ್ಲಿ ಮುಂಬೈ. ನನ್ನನ್ನು ಬೀಳ್ಕೊಡಲು ಬಂದ ಧಾರವಾಡದ ಟ್ಯಾಕ್ಸಿಗಳು ಕಿತ್ತೂರ ಹತ್ತಿರ ಇರಬೇಕು. ನಾನು ಮುಂಬೈಯಲ್ಲಿದ್ದೆ. BOAC ಯವರು ವ್ಯವಸ್ಥೆ ಮಾಡಿದ್ದ Sun n Sand Hotel ದಲ್ಲಿ ವಸತಿ. ಅಂಥ ರೂಮಿನಲ್ಲಿ ಇಳಕೊಂಡಿದ್ದು ಜೀವನದಲ್ಲಿ ಮೊದಲ ಬಾರಿ. ಹೆದರಿ ಹೆದರಿ ಬಾಗಿಲು ತೆಗೆಯುತ್ತಿದ್ದೆ. ಒಂದು ಬಟನ್ನು ಒತ್ತಿದಾಗ, ಸಂಗೀತ ಸುರುವಾಯಿತು. ಗಾಬರಿಯಾದೆ. ಯಾವುದೋ ಸುಡುಗಾಡು ಇಂಗ್ಲಿಷ್ ಸಂಗೀತ.

ಸಂಜೆ ಮುಂಬೈಯಲ್ಲಿ ಅಲ್ಲಲ್ಲಿ ಸುತ್ತಾಡಿದೆ. ಬೀಚು. ಸಮುದ್ರ–ಮುಂಬೈ ಸಮುದ್ರ– ಗಂಡ ಸತ್ತವಳ ಹಾಗೆ. ಯಾವ ಶೋಭೆಯೂ ಇಲ್ಲ. ಕರಿಯ ಬಂಡೆಗಲ್ಲುಗಳು. ಅವುಗಳ ಮೇಲೆ ಗಂಡು–ಹೆಣ್ಣು. ಗಂಡು–ಹೆಣ್ಣು. ಅದೇ ನಿಜವಾದ ಜಗತ್ತು. ಕೈಗೆ ಕೈ ಹೆಣೆದಾಗ, ಕೈ ನಡುವನ್ನು ಬಳಸಿದಾಗ, ಕಿವಿ ತುಂಬ ಏನೋ ಪಿಸುಗುಟ್ಟಿದಾಗ ಮುಂಬೈಯಂಥ ಮರುಭೂಮಿಯಲ್ಲೂ ಹಸಿರು ಬೀಸಿದಂತೆ.

× × × ×

BOAC ಯ ಜಂಬೋ ವಿಮಾನ ರಾಕ್ಷಸನ ಹಾಗೆ. ಅದರ ಹೊಟ್ಟೆಯಲ್ಲಿ ಗುಬ್ಬಿಯ ಹಾಗೆ ಕುಳಿತಿದ್ದೆ. ಸುಮಾರು ೪೦೦ ಜನ ಪ್ರಯಾಣಿಕರು. ನೆಲದಿಂದ ೩೫ ಸಾವಿರ ಫೂಟು ಎತ್ತರಕ್ಕೆ ಮುಗಿಲು ಸೀಳಿಕೊಂಡು ಹಾರುತ್ತಿತ್ತು. ಅಂತರದಲ್ಲೇ ಸುಮ್ಮನೆ ಗುರುಗುಟ್ಟುತ್ತ ನಿಂತಿದೆಯೋ ಅಂತ ಒಮ್ಮೊಮ್ಮೆ ಅನಿಸಿಕೆ. ಆದರೆ ಕ್ಷಿತಿಜದ ರೇಖೆಗಳು ಬದಲಾದಂತೆ, ಕೆಳಗೆ ಸಮುದ್ರಗಳೆಲ್ಲ ಹೊಂಡ–ಕೆರೆಗಳಾಗಿ ಹಿಂದೆ ಹಿಂದೆ ಸರಿಯುತ್ತಿದ್ದಂತೆ ಪ್ರಯಾಣದ ಕಲ್ಪನೆ ಉಂಟಾಗುತ್ತಿತ್ತು. ಕುಳಿತಲ್ಲಿಯೇ ಉಪಹಾರ, ಚಹಾ, ಕಾಫಿ ವಗೈರೆ. ಏನು ಕೊಟ್ಟರೋ ಎಲ್ಲಾ ತಿಂದೆ. ಹೊಟ್ಟೆ ನಿಬ್ಬರಾಗಿ ಒಮ್ಮೊಮ್ಮೆ ಗುರ್ ಅನ್ನುತ್ತಿತ್ತು.

ಸುತ್ತಲೆಲ್ಲ ಬಿಳಿಯರು. ವಿಮಾನ ಪರಿಚಾರಿಕೆಯರಲ್ಲಿ ಒಬ್ಬಳು ಭಾರತೀಯಳು. ಮುದಿ ಮೋರೆ, ಸುಕ್ಕು ತೊಗಲು. ಏರಿಳುವುಗಳಿಲ್ಲದ ಗಂಗಾಬಯಲು. ಅಂತೂ ಭಾರತವನ್ನು ಪ್ರತಿನಿಧಿಸಿದ್ದಳು. ನನಗೆ ಕುಂತರೆ ಹೆದರಿಕೆ, ನಿಂತರೆ ಹೆದರಿಕೆ. ಕುಳಿತ ಸೀಟು ಹಿಂದೆ ಒರಗಿಸುವುದು ಗೊತ್ತಿಲ್ಲ. ಎಲ್ಲಾ ಕೇಳಿ ತಿಳಕೊಂಡೆ. ಭೂಮಿ–ಆಕಾಶಗಳ ನಡುವೆ ನಾಚಿಕೆ ಎಲ್ಲಿಯದು ?

× × × ×

ಲಂಡನ್.... ಇಷ್ಟು ದಿನ ಬರಿ ಅಕ್ಷರಗಳ ಗುಂಪಾಗಿ, ಧ್ವನಿಗಳ ಮೊತ್ತವಾಗಿ, ನಕಾಶದಲ್ಲಿನ ಚಿಕ್ಕದಾಗಿದ್ದ ಲಂಡನ್ ನಗರಕ್ಕೆ ಮುಂಜಾನೆ ೮-೨೦ ಕ್ಕೆ ಬಂದಾಗ ಭಾರತದಲ್ಲಿ ಮಟಮಟ ಮಧ್ಯಾಹ್ನ.... Astor College ಎಂಬಲ್ಲಿ ನನ್ನ ವಸತಿ ವ್ಯವಸ್ಥೆ.... ಲಂಡನ್ ಜನ ಎದ್ದಿದ್ದರೋ ಇಲ್ಲವೋ, ಕಾರುಗಳು ಮಾತ್ರ ಹರಿದಾಡತೊಡಗಿದ್ದವು. ಥಂಡಿಯಲ್ಲಿ ಬಾಯಿಂದ ಹೊಗೆ ಬಿಡುತ್ತ ವಸತಿಗೃಹಕ್ಕೆ ಹೋದೆ. ದಪ್ಪನ್ನ ಹೆಣ್ಣೊಂದು ಕೊಟ್ಟ ಮೂರು ಕೀಲಿಕೈ ತಗೊಂಡು ಲಿಫ್ಟ್ ಹತ್ತಿ ೩ನೆಯ ಫ್ಲೋರಿಗೆ ಹೋದೆ. ಏನಿದೆ? ಎಲ್ಲಾ ಗೋಡೆ. ಒಂದು ಬಾಗಿಲವೂ ಇಲ್ಲ. ಜೇಲಿನಲ್ಲಿ ತಂದು ಒಗೆದಂತಾಗಿತ್ತು. ಒಂದೊಂದೇ ಬಾಗಿಲು ತೆರೆಯುತ್ತ ಮುಚ್ಚುತ್ತ ಅಭಿಮನ್ಯುವಿನಂತೆ ಒಳ ಹೊಕ್ಕೆ. ರೂಮು ಸಿಕ್ಕಿತು. ಅದೂ ಒಂದು ಜೇಲೇ. ಇಡೀ ಇಂಗ್ಲಂಡೇ ಒಂದು ಜೇಲಿರಬಹುದೇ ಅನಿಸಿತು. ಹೆಚ್ಚು ಮಾತಿಲ್ಲ, ಕತೆಯಿಲ್ಲ. ಬಿಗಿದುಕೊಂಡ ಮುಖ. ಮಾತುಮಾತಿಗೆ Thank you ಎಂಬ ಪ್ರತ್ಯಯ. ಅದಕ್ಕೇನೂ ಅರ್ಥವಿಲ್ಲ, ಧ್ವನಿಯಿಲ್ಲ. ಲಂಡನ್ ನಗರಕ್ಕೆ ಹೃದಯವಿಲ್ಲ ಅನಿಸಿತು.

ಮಧ್ಯಾಹ್ನ ಒಬ್ಬ ಬಂದ. ಕೃಷ್ಣಮೆನನ್ ಹಾಗೆ ಮುಖವಿದ್ದ ಮುದುಕ ಅವನು ಬ್ರಿಟಿಶ್ ಕೌನ್ಸಿಲ್‌ದವರು ನನಗಾಗಿ ಕಳಿಸಿದ್ದ ಗೈಡು ಬಂದು ಆರಾಮಾಗಿ ಕುಳಿತ. ಅವನಿಗೂ ಆ ಕೋಣೆ ನೋಡಿ ಅಡವಿಯೇ ಅನಿಸಿತ್ತು. ಹೊರಬರುವಾಗ ನಾನೇ ಬಾಗಿಲು ತಗೆಯುತ್ತ ಬಂದೆ. ಆ ಮುದುಕನ ಗಡಿಬಿಡಿ, ಅವಸರ, absent-mindedness ನೋಡಿ 'ಅಂತೂ ಲಂಡನ್ನಿನಲ್ಲಿ ಮನುಷ್ಯರಿದ್ದಾರೆ' ಅನಿಸಿ ಉಸಿರುಬಿಟ್ಟೆ. ಅವನು ಕರೆದಲ್ಲೆಲ್ಲ ಅವನ ಹಾಗೇ ಜೇಪುಗಾಲು ಹಾಕುತ್ತ ಅದೇನು ಇದೇನು ಅಂತ ಸಣ್ಣ ಮಕ್ಕಳ ಹಾಗೆ ಕೇಳುತ್ತ ಹುರುಪಿನಿಂದ ನಡೆದೆ. ಅವನೂ ಎಲ್ಲಾ ಬಿಡಿಬಿಡಿಸಿ ಕತೆ ಹೇಳುವಂತೆ ಹೇಳಿದ. ಟ್ಯೂಬನಲ್ಲಿ ಕುಳಿತು British Council ಇದ್ದ ಜಾಗೆಗೆ ಬಂದೆವು. ಜಾರುವ ಮೆಟ್ಟಲು ಸಿನೆಮಾದಲ್ಲಿ ಮಾತ್ರ ನೋಡಿದ್ದೆ! – ಮಜಾ ಅನಿಸಿತು.

ಕ್ರಿಸ್ಟಿನ್ ಲಾರ್ಗನ್: ಅವಳ ನಗೆ, ಮಾತು, ಆತ್ಮೀಯತೆ ನೆನೆದಾಗ ಈಗಲೂ ಥಂಡಿಗಾಳಿಯಲ್ಲಿ ಬೆಚ್ಚಗಿನ ಗಾಳಿ ಹರಿದಂತೆ. Come on ಎಂದವಳೇ ಕೈ ಕುಲುಕಿದಳು. ಹತ್ತಿರ ಕೂಡ್ರಿಸಿಕೊಂಡು ಕ್ಷೇಮ ಸಮಾಚಾರ. ಹಣ ಕೊಡಿಸಿದಳು. ತೋಳಿಗೆ ಕೈ ಹಾಕಿ ಹೊರಬಂದರು. ಅವಳು ಉಳಿದವರ

ಜೊತೆಗೂ ಹಾಗೆಯೇ ವರ್ತಿಸುತ್ತಿರಬೇಕು. "ಇಂಗ್ಲೆಂಡಿನಾಗ ಹಲಕಾ ಹೆಣ್ಣು ಬಾಳ. ಸ್ವಲ್ಪ ನೋಡಿ ಬಾಳುವೆ ಮಾಡು"— ಎಂದು ಹೆಂಡತಿಯು ವಾರ್ನಿಂಗ್ ಸಹಜವಾಗಿಯೇ ನೆನಪಾಯಿತು. ನಗೆ ಬಂತು.

× × × ×

ಇಲ್ಲಿಯ ಹೆಣ್ಣುಗಳು, ಇಲ್ಲಿಯ ಗಂಡುಗಳು.... ಯಾವುದು ಏನು ಅಂತ ಪತ್ತೆಯಾಗುವುದೇ ಕಷ್ಟವಾಗಿತ್ತು ಮೊದಮೊದಲು. ಉದ್ದುದ್ದ ಕೆಂಗೂದಲು. ಕೆಂಪು ಮೋರೆ, ಗಡ್ಡವಿಲ್ಲದ ಗಲ್ಲಗಳು. ಗಂಡಿಗೆ ಸೀರೆ ಉಡಿಸಿದರೆ ಭಾರತದಲ್ಲಿ ಯಾವನಾದರೂ ಸೆರಗು ಜಗ್ಗಬಹುದು.... ಈಗೀಗ ಗೊತ್ತಾಗುತ್ತಿದೆ. ಕಣ್ಣಿನ ಬೆಳಕಿನಲ್ಲಿ, ಎದೆಯ ಪರ್ವತಗಳಲ್ಲಿ ಇತ್ಯಾದಿ.

ಲಂಡನ್ನಿಗಿಂತ ಲೀಡ್ಸ್ ಹೆಚ್ಚು warm and human ಅನಿಸುತ್ತದೆ. ಜನ ಇಲ್ಲಿ ನಗುತ್ತಾರೆ. ಗಟ್ಟಿಯಾಗಿ ಮಾತಾಡುತ್ತಾರೆ. ಜೋಕು ಹೊಡೆಯುತ್ತಾರೆ. Overseas students ಅಂದರೆ ಹೆಚ್ಚು ಕಾಳಜಿ. ಆದರೂ ಅವರ sense of privacy.

ಅದು ಬಹುಶಃ ಅವರ national character. ಡಾ. ರ್‍ಯಾವೆಟ್ಜ್ ಅಂತ ಫಿಲಾಸಫಿ ಪ್ರಾಧ್ಯಾಪಕ ಮೊನ್ನೆ ಇದೇ ಹೇಳಿದರು. ಇಷ್ಟು ಅಂದರೆ ಇಷ್ಟು. ಲಕ್ಷ್ಮಣ ರೇಖೆ. ಅದರ ಆಚೆ ದಾಟುವಂತಿಲ್ಲ. ಅದರ ಈಚೆ ಎಲ್ಲ ಇದೆ. ಹಾಗಾದರೆ ಅವರ ವಿನಯ, ಅತಿಥಿ ಸತ್ಕಾರ, ನಗು ಎಲ್ಲ ವಂಚಕತನವೆ ? Hypocrisy ? ಒಬ್ಬ ಆಫ್ರಿಕನ್ ವಿದ್ಯಾರ್ಥಿಯ ಪ್ರಶ್ನೆ ಇದು. ಉತ್ತರ : ಅಲ್ಲ, ಅದು ಅವರ ಗುಣಧರ್ಮ.

ರ್‍ಯಾವೆಟ್ಜ್ ಬಹಳ ಗಂಭೀರವಾಗಿ ಕೆಲ ಮೂಲ ಸಮಸ್ಯೆಗಳ ಬಗ್ಗೆ ಮಾತಾಡಿದರು. ಈ ಜನಕ್ಕೆ ವಿಚಾರಸ್ವಾತಂತ್ರ್ಯವಿದೆ, ವಾಕ್-ಕೃತಿ ಸ್ವಾತಂತ್ರ್ಯವಿದೆ. ಆದರೆ ಎಲ್ಲಿಯೋ — ಜನನ-ಮರಣದ ವರ್ತುಲದಲ್ಲಿ ಎಲ್ಲಿಯೋ— ಕೊಂಡಿ ತಪ್ಪಿದೆ. ಒಂದು ಇನ್ನೊಂದಕ್ಕೆ, ನೆರಳು ನೆರಳಲ್ಲಿ ಲೀನವಾದಂತೆ, ಹೊಂದಿಕೊಂಡಿಲ್ಲ. ಹೀಗಾಗಿ ಸಾವು ಇವರಿಗೆ ಸುಲಭವಾಗಿ ದಕ್ಕುವುದಿಲ್ಲ. They can't face death calmly.

ಹೌದು. ಇಲ್ಲಿಯ ಮುದುಕರು, ಮುದುಕಿಯರು.... ನೋಡಿದಾಗ ಒಂದು ಬಗೆಯ ವಿಚಿತ್ರ ಸಂಕಟವಾಗುತ್ತದೆ. ಕವಿತೆ ಬರೆಯಬೇಕೆನಿಸುತ್ತದೆ. ಅಡಿಯಿಂದ ಮುಡಿತನಕ ಉಣ್ಣೆಯ ಬಟ್ಟೆ. ಬೆಲೆಯುಳ್ಳವು. ಬಣ್ಣಬಣ್ಣದವು.

ಆರೋಗ್ಯ ಗರಿ. ಅವರ ಕಣ್ಣಲ್ಲಿ ಜೀವವಿಲ್ಲ. ಆಗಷಿಯಲ್ಲಿ (?) ತಪ್ಪಿಸಿಕೊಂಡವರಂತೆ ಮುಖ. ಅಥವಾ ನಿರ್ವಿಕಾರ ಮುಖ. ದಾರಿ ಬದಿಯ ಬೆಂಚಿನಲ್ಲಿ ಕುಳಿತು ನೋಡುತ್ತವೆ. ಬಾಯಿ ತೆರೆದರೆ ಧಂಡಿಯಾದೀತೆಂದು (?) ಹೆದರಿ ಬಾಯಿ ಮುಚ್ಚಿಕೊಂಡು ನೋಡುತ್ತವೆ. ಅಥವಾ ನೋಡುವುದಿಲ್ಲ. ಭರ್ ಭರ್ ಎಂದು ಧಡಗುಟ್ಟಿ ಓಡುವ ಕಾರುಗಳು. ಕೆಂಪು, ಹಸಿರು ದಿಕ್ಸೂಚಿ ಲೈಟುಗಳು. ಪುಟು ಪುಟು ನೆಗೆಯುವ ಮಕ್ಕಳು. ಸಂಜೆಗೋ, ಹಗಲಿಗೋ ಕೈಹಾಕಿ ತಮ್ಮ ರಕ್ತವನ್ನು ಜಗತ್ತಿನಲ್ಲಿ ಹಿನಾಗುವ (?), ಜೀನಾಗುವ (?) ತರುಣಿಯರು, ತರುಣರು.... ಮುದುಕ ಮುದುಕಿಯರು ನೋಡುತ್ತವೆ. ಅಥವಾ ನೋಡುವುದೇ ಇಲ್ಲ. ಸುತ್ತಲೆಲ್ಲ ಜೀವನ ಕಾರಂಜಿಯಾಗಿ ಪುಟಿಯುತ್ತಿರುವಾಗ ನಡುವೆ ಗೋರಿಯಾಗಿ, ಮುದ್ದೆಯಾಗಿ, ಮೌನವಾಗಿ ಗೂಡಿಸಿಕೊಂಡು ಕೂತಿರುತ್ತವೆ.

ಭಾರತದಲ್ಲಿ ವಯಸ್ಸಿಗೆ, ಹಿರಿಯತನಕ್ಕೆ ಕಿಮ್ಮತ್ತಿದೆ. ಮಕ್ಕಳು ಮೊಮ್ಮಕ್ಕಳು, ಮರಿಮಕ್ಕಳು. ಮನೆಯಲ್ಲಿ ಮದುವೆ ಮಾಡಿದಾಗೊಮ್ಮೆ, ಮಕ್ಕಳು ಹೊರಗೆ ಹುಟ್ಟಿದಾಗೊಮ್ಮೆ ವಂಶ ವೃಕ್ಷಕ್ಕೆ ಕರುಳಿನ ಬಳ್ಳಿ ಟಿಸಿಲೊಡೆಯುತ್ತದೆ. ಕರಿಕೆ ಬೇರು ಹಬ್ಬುತ್ತದೆ. ಸಂಬಂಧ ಗಾಢವಾಗುತ್ತದೆ. ಸಾಯುವಾಗ ಸುತ್ತ ನೆರೆದವರೆಲ್ಲ ಕಣ್ಣೀರಿಡುತ್ತಾರೆ. ಸತ್ತ ಮೇಲೆ ನೆನೆಸುತ್ತಾರೆ. ಕತೆ ಮಾಡಿ ಹೇಳುತ್ತಾರೆ. ಇಲ್ಲಿ ?

ಇಲ್ಲಿ ಸಾವೇ ದುಬಾರಿ. ಚೆನ್ನಾಗಿ ಉಂಡು ತಿಂದ ದೇಹ ಜುಗ್ಗಾಗಿದ್ದರೂ ಸಾಯುವ ಉಸಾಬರಿಗೆ ಹೋಗುವುದಿಲ್ಲ. ಸಾವು ಸುತ್ತಲೂ ಸುಳಿಯುತ್ತ ಕಣ್ಣು ಮುಚ್ಚಾಲೆ ಆಡುತ್ತದೆ. ಮುದುಕ ಮುದುಕಿಯರು ಆಗಲೇ ಸತ್ತಿದ್ದಾರೆ. ಬಹುಶಃ Life Force —ಜೀವಶಕ್ತಿ— ಬಹುಬೇಗ ಹಾಳಾಗಿ ಹೋಗುವುದರಿಂದ ಇರಬೇಕು. ಅಕಾಲಿಕವಾಗಿ ಮುಪ್ಪು ಆವರಿಸುತ್ತದೆ. ೧೫–೧೬ ಕ್ಕೇ ಶುರು ಗಂಡು–ಹೆಣ್ಣಿನ ಸಂಬಂಧ. ಎಷ್ಟು ವರ್ಷ ನಡೆದೀತು ? ೧೦ ವರ್ಷ. ೧೫ ವರ್ಷ. ಮುಗಿಯಿತು. ಮಾಂಸ ಮುದುಡಿದಾಗ, ಮೊದಲಿ ಗತಿ ಮುಗಿದಾಗ, ತಾರುಣ್ಯ ಹೋಗಿ ಮುಪ್ಪು ಹೆಚ್ಚು ಇರುತ್ತದೆ. ಮುಪ್ಪಿಗೂ ಸಾವಿಗೂ ಸಾವಿರ ಸಾವಿರ ಮೈಲಿಯಂತರ. ಹೆಜ್ಜೆ ಹೆಜ್ಜೆಗೂ ಸಾವು. ಹಿರೆ ಸಾವು ಬಂದಾಗ ಅದಕ್ಕೆ ದಕ್ಕುವುದು ಜೀವವಲ್ಲ: ಹೆಣ

■ ■ ■

ಮಾಧವ ಮಹಿಷಿ

'ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಕ್ರಾಂತಿ'

ಒಂದು ಪ್ರತಿಕ್ರಿಯೆ

ಶ್ರೀ ಪಳಪೇಟೆ ಚಿಂತಾಮಣಿಯವರು ಹೆದರಿದ್ದಾರೆ. ಕರ್ನಾಟಕದಲ್ಲಿ ಇತ್ತೀಚೆ ಗಂಭೀರ ಸ್ವರೂಪ ತಳೆಯುತ್ತಿರುವ ವೈದಿಕೇತರ ಚಳವಳಿ ತಮ್ಮನ್ನು ಎಲ್ಲಿ ಬಲಿ ತೆಗೆದುಕೊಂಡೀತೋ ಎಂಬ ಭಯ ಅವರದು. ಅವರ 'ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಕ್ರಾಂತಿ' ಲೇಖನ (ಸಂಕ್ರಮಣ ೬೧) ಇನ್ನಾವುದಕ್ಕಿಂತಲೂ ಈ ಮಾತನ್ನು ಹೆಚ್ಚು ಸ್ಫುಟವಾಗಿ ವ್ಯಕ್ತಗೊಳಿಸುತ್ತದೆ. ಇಲ್ಲವಾದರೆ, "ನಮ್ಮ ಸಂಸ್ಕೃತಿಯು ಇಂದಿಗೂ ಅಹಿಂಸಾತ್ಮಕ ಸಂಸ್ಕೃತಿಯೇ ಆಗಿದೆ. ಅನ್ಯ ದೇಶಗಳಲ್ಲಿ ಸಾಂಸ್ಕೃತಿಕ ಕ್ರಾಂತಿಯು ಬಲಪ್ರಯೋಗದಿಂದ ನಡೆದಿರಬಹುದು. ಆದರೆ ಭಾರತದಲ್ಲಿ ಅದು ಅಹಿಂಸಾತ್ಮಕವಾಗಿವೇ ನಡೆಯುತ್ತದೆ, ನಡೆಯಬೇಕು. ತಲೆಯಲ್ಲಿ ತುಂಬಿಕೊಂಡಿರುವ ಅನಿಷ್ಟಗಳಿಂದಾಗಿ ಉಂಟಾದ ಅನಿಷ್ಟ ಪರಿಣಾಮಗಳನ್ನು ತಲೆ ಹೊಡೆಯುವವರಿಂದ ಹೋಗಲಾಡಿಸುವದಿರದೆ, ತಲೆ ಹೊಡೆಯಬೇಕೆಂಬ ಸಂಕೇತವನ್ನು ಅರ್ಥಮಾಡಿಕೊಂಡು ತಲೆಯಲ್ಲಿದ್ದುದನ್ನು ಹೊಡೆಯುವದರಿಂದ ತೆಗೆಯುವದಿರುತ್ತದೆ...." ಮುಂತಾದ ಮಾತುಗಳಿಗೆ ಬೇರಿನ್ನಾವ ಅರ್ಥ ಹೇಳಬಹುದು ? ಈ ಶತಮಾನದಲಿ ಈ ಮೊದಲು ನಡೆದ ಬ್ರಾಹ್ಮಣೇತರ ಆಂದೋಲನಗಳಿಗೂ ಇಂದಿನದಕ್ಕೂ ಇರುವ ಅಂತರವನ್ನು ಪಳಪೇಟೆಯವರು ಸರಿಯಾಗಿಯೇ ಗುರುತಿಸಿದ್ದಾರೆ. ಬ್ರಾಹ್ಮಣೇತರರಲ್ಲೂ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಇಂದು ಸಾಕಷ್ಟು ದೊಡ್ಡದಾಗಿಯೇ ಇದೆ. ತಮ್ಮೆಲ್ಲ ಕಷ್ಟಗಳಿಗೂ ಬ್ರಾಹ್ಮಣರೇ ಕಾರಣವೆಂದೊಮ್ಮೆ ಅವರ ತಲೆಗಳಲ್ಲಿ ಹೊಕ್ಕರೆ ಅದರ ಪರಿಣಾಮ ಅಹಿಂಸಾತ್ಮಕವಾಗುಳಿಯಲಿಕ್ಕಿಲ್ಲ; ಅವರ ರೊಚ್ಚು ಅನೇಕ ಬ್ರಾಹ್ಮಣರ ತಲೆಗಳನ್ನೇ ಆಹುತಿ ತೆಗೆದುಕೊಳ್ಳಬಹುದು; ಆ 'ಕ್ರಾಂತಿ'ಯು

ಕಾವಿನಲ್ಲಿ ಇಂಥವರು ಅಂಥವರು ಎಂಬ ತಾರತಮ್ಯ ಮಾಡುವಷ್ಟು ತಾಳ್ಮೆಯೂ ಅವರಲ್ಲಿ ಉಳಿಯಲಿಕ್ಕಿಲ್ಲ ಎಂಬ ಅಂಶಗಳನ್ನು ಪಳಮೇಟಿಯವರು ಚೆನ್ನಾಗಿಯೇ ಗುರುತಿಸಿರುವುದೇ ಅವರ ಈ ಧೈರ್ಯಕ್ಕೆ ಕಾರಣವೆಂಬುದರಲ್ಲಿ ಸಂಶಯವಿಲ್ಲ.

ಬ್ರಾಹ್ಮಣ ತಂದೆ ತಾಯಿಗಳಿಗೆ ಮಗನಾಗಿ ಹುಟ್ಟಿದ ಆಕಸ್ಮಿಕಕ್ಕಾಗಿ ಅತಿಯಾಗಿ ಪಶ್ಚಾತ್ತಾಪಪಡುತ್ತಿರುವ ಆಧುನಿಕ ಕನ್ನಡ ಲೇಖಕರಲ್ಲಿ ಬೀಜಿಯುವರನ್ನುಳಿದರೆ ಬಹುಶಃ ಪಳಮೇಟಿಯವರೇ ಪ್ರಮುಖರು. ಅವರ ಎಲ್ಲ ಬರವಣಿಗೆಗಳಲ್ಲೂ ಈ ಅಂಶ ಎದ್ದು ಕಾಣುತ್ತದೆ.

ವೈಚಾರಿಕ ಕ್ರಾಂತಿಯ ಅವಶ್ಯಕತೆಯನ್ನು ಒತ್ತಿ ಒತ್ತಿ ಹೇಳಬೇಕೆಂದು ಹೊರಟಿರುವ ಪಳಮೇಟಿಯವರ ಈ ಲೇಖನದಲ್ಲಿ ಮೊದಲಿನಿಂದ ಕಡೆಯ ತನಕವೂ ಒಡೆದುಕಾಣಿಸುವ ಒಂದು ಅಂಶವೆಂದರೆ ಬೌದ್ಧಿಕ ಪ್ರಾಮಾಣಿಕತೆಯ ಅಭಾವ. ಅವರು ಇಲ್ಲಿ ಹೇಳಲೆತ್ನಿಸಿರುವ ಮಾತುಗಳಲ್ಲಿ ಅವರಿಗೆಯೇ ಪೂರ್ತಿ ವಿಶ್ವಾಸವಿದೆಯೋ ಎಂದು ಸಂಶಯಪಡುವಂತಾಗುತ್ತದೆ. ಅವರ ಇಡೀ ಲೇಖನ ಕಾಲೇಜು ಅಧ್ಯಾಪಕನೊಬ್ಬ ತನ್ನ ವಿದ್ಯಾರ್ಥಿಗಳೆದುರು ವರು ವರುಷವೂ ಒಪ್ಪಿಸುವ ಒಂದು ಹಳಸಿದ ಪಾಠದಂತೆ ಭಾಸವಾಗುತ್ತದೆ– ಎಂದೋ ಕೂಡಿಹಾಕಿದ ಬಂಡವಲಿನ ಮೇಲಿಂದಲೇ ಇಂದಿಗೂ ಬಂಡಲ್ ಹೊಡೆಯುತ್ತಿರುವವರಂತೆ.

ಇಂದೋ ನಾಳೆಯೋ ಆಗಬಹುದಾದ ಕ್ರಾಂತಿ ಅಹಿಂಸಾತ್ಮಕವಾಗುಳಿಯಬೇಕು ಅರ್ಥಾತ್ ಬ್ರಾಹ್ಮಣ ಎಂದು ಮುದ್ರೆಯೊತ್ತಲ್ಪಟ್ಟವರ ತಲೆ ಹೋಗಬಾರದು ಎಂಬ ಬೀಜಮಾತು ಹೇಳುವುದಕ್ಕಾಗಿ ಪಳಮೇಟಿಯವರು 'ಸಂಕ್ರಮಣ'ದ ಆರು ಪುಟಗಳನ್ನು ವ್ಯಯಿಸಿದ್ದಾರೆ. ನಮ್ಮ ಸಂಸ್ಕೃತಿ ಪದಕ್ಕೆ "ಇಂಗ್ರೇಜಿಯ ಕಲ್ಚರ ಅನ್ನುವ ಪದವು" ಏಕೆ ಸಮಾನಾರ್ಥಕವಲ್ಲ (ಯಾಕೆಂದರೆ ಇಂಗ್ರೇಜಿಯಲ್ಲಿ ಅಗ್ರಿಕಲ್ಚರ ಎಂಬುದೂ ಇದೆ, ಶೆರಿ–ಕಲ್ಚರ ಎಂಬುದೂ ಇದೆ.); ಮಾನವ ಸಂಸ್ಕೃತಿಯ ಭೌತಿಕ ಸ್ವರೂಪ (ಮಟೀರಿಯಲಿಸ್ಟ) ಹಾಗೂ ಆಧ್ಯಾತ್ಮಿಕ (ಸ್ಪಿರಿಚ್ಯುಅಲ್) ಸ್ವರೂಪ; ಬ್ರಿಟಿಶರು ನಾಲ್ಕನೆಯ ದರ್ಜೆಯಲ್ಲಿ ಏಕೆ ಉಳಿಯಬೇಕಾಗಿದೆ; "ಇಂದಿನ ಕನ್ನಡ ಸಾಹಿತ್ಯವನ್ನು ಅತ್ಯುಚ್ಚ ಪದವಿಯವರೆಗೆ ಅಭ್ಯಾಸ ಮಾಡಿದ ಪ್ರಾಜ್ಞರೂ ಕೂಡ ಇಂದಿನ ಕನ್ನಡ ಸಾಹಿತ್ಯದಲ್ಲಿ

ಜೋಳಿಗೆ ಒಹಳಿಗೆ" ಎಂದೇತಕೆ ತಿಸ್ಸುತ್ತಿದ್ದಾರೆ; "ಅಂದು ಸಾಂಸ್ಕೃತಿಕ ಕ್ರಾಂತಿ ಮಾಡುವಲ್ಲಿ ಮಹತ್ವದ ಪಾತ್ರವಾಡಿದ ಕನ್ನಡವು ಇಂದು ನಿರ್ವಾಣಿ" ಏಕಾಗುತ್ತಿದೆ; "ಯುರೋಪಿಯನ್ ಸಮಾಜದ ಮೇಲ್ವರ್ಗಕ್ಕೆ ಧನದ ದೌಸ್ಥ (ಅರಿಸ್ಟೊಕ್ರಾಟ್) ದವರೆಂದರೆ, ಭಾರತೀಯ ಸಮಾಜದ ಮೇಲು ವರ್ಗಕ್ಕೆ ಅಂದರೆ ಬ್ರಾಹ್ಮಣರಿಗೆ ಬೌದ್ಧಿಕ (ಇಂಟಲೆಕ್ಚುಅಲ್) ದವರೆಂದು ಹೇಳುತ್ತಾರೆ"; ನಮ್ಮ "ಸಾಂಸ್ಕೃತಿಕ ಸಂಸ್ಥೆಗಳಿಗೆ ಲೋಕಸತ್ತೆಯ ಸಂಸ್ಕಾರ ಮಾಡಲಾಗಿಲ್ಲ. ಕಾರಣವೇನೆಂದರೆ ಕೆಲವು ವೈದಿಕ ಪ್ರಜ್ಞೆಯನ್ನು ತಲೆಯಲ್ಲಿ ತುಂಬಿಕೊಂಡವರು ಅದಕ್ಕೆ ವಿರೋಧಿಗಳಾಗಿದ್ದಾರೆ. ಇನ್ನೂ ತಲೆಯಲ್ಲುಳಿಸಿಕೊಂಡ ಬ್ರಾಹ್ಮಣೀ ಸಾಮ್ರಾಜ್ಯವಾದವು ಅದಕ್ಕೆ ಆತಂಕಗಳನ್ನೊಡ್ಡುತ್ತಿದೆ. ಭಾರತಕ್ಕೆ ಲೋಕಸತ್ತೆಯು ಹೊಂದುವದಿಲ್ಲವೆಂದವರ ಭಾವನೆಯಾಗಿದೆ. ಆದರೆ ಜೀರ್ಣವಾದ ವೈದಿಕ ಪ್ರಜ್ಞೆಯು ಇಂದು ತಲೆಯಲ್ಲಿ ಮಾತ್ರ ಉಳಿದಿದೆ." ಮುಂತಾದ ತುಂಡು ವಿಚಾರಗಳನ್ನು ಪ್ರಯಾಸಪೂರ್ವಕ ಒಂದು ಲೇಖನದಲ್ಲಿ ಒಡಿದುಹಾಕುವ ಅವರ ಪ್ರಯತ್ನ ಹಾಸ್ಯಾಸ್ಪದವಾಗಿದೆ.

ಶ್ರೀ ಹಳಪೇಟಿ ಚಿಂತಾಮಣಿಯವರಿಗೆ ನಾನು ಕೇಳಬೇಕೆಂದಿರುವ ಪ್ರಶ್ನೆ ಇದು–ಸ್ವಾಮೀ, ನೀವು ಇಷ್ಟು ದಿನವೂ ಹೇಳುತ್ತಲೇ ಬಂದಿರುವ 'ಕ್ರಾಂತಿಕಾರಿ' ವಿಚಾರಗಳಲ್ಲಿ ಸೇಕಡಾ ಎಷ್ಟು ಭಾಗ ನಿಮ್ಮ ವೈಯಕ್ತಿಕ ಬದುಕಿನಲ್ಲಿ ಅಳವಡಿಸಿ ಕೊಂಡಿದ್ದೀರಿ ? ವೈದಿಕ ಕರ್ಮಾನುಷ್ಠಾನಗಳ ವಿರುದ್ಧ ಬಂಡೆದ್ದ ಬಸವೇಶ್ವರ ತಾನು ಹುಟ್ಟಿದ ಜಾತಿಯನ್ನು ತಿರಸ್ಕರಿಸುವಷ್ಟು ಎದೆಗಾರನಾಗಿದ್ದ. ಆದರೆ ಕೂತರೆ ನಿಂತರೆ ಬ್ರಾಹ್ಮಣ್ಯದ, ಬ್ರಾಹ್ಮಣರ 'ಪಾಪ'ಗಳ ಬಗ್ಗೆ ಆಡಿಕೊಂಡು ಕ್ರಾಂತಿಕಾರಿಯೆಂದು ಬೆನ್ನು ಚಪ್ಪರಿಸಿಕೊಳ್ಳುತ್ತಿರುವ ನೀವು ನಿಮ್ಮ ಬ್ರಾಹ್ಮಣ್ಯ ವನ್ನು ಕೈಬಿಡಲು ಇದುವರೆಗೆ ಏನೇನು ಮಾಡಿದ್ದೀರೆಂಬುದನ್ನು ದಯವಿಟ್ಟು ನಿಮ್ಮ ಅಭಿಮಾನಿಗಳಿಗಾದರೂ ಹೇಳುತ್ತೀರಾ ?

ಇನ್ನೊಂದು ಮಾತು. ಮುಂದಾಗಬಹುದಾದ ಕ್ರಾಂತಿ ಅಹಿಂಸಾತ್ಮಕ ವಾಗಬೇಕು (ನಿಮ್ಮ ಮಾತಿನಲ್ಲೇ ಹೇಳುವದಾದರೆ, "ಅನ್ಯ ದೇಶಗಳಲ್ಲಿ ಸಾಂಸ್ಕೃತಿಕ ಕ್ರಾಂತಿಯು ಬಲಪ್ರಯೋಗದಿಂದ ನಡೆದಿರಬಹುದು. ಆದರೆ ಭಾರತ ದಲ್ಲಿ ಅದು ಅಹಿಂಸಾತ್ಮಕವಾಗಿಯೇ ನಡೆಯುತ್ತದೆ, ನಡೆಯಬೇಕು.") ಎಂದು

ಹೇಳುವ ನಿಮಗೆ ಇತಿಹಾಸದಿಂದ ಒಂದು ಪಾಠವನ್ನು ಕಲಿಯಲು ಸಾಧ್ಯವಾಗಲಿಲ್ಲವಲ್ಲ ಎಂದು ನನ್ನ ಕೊರಗು. ಜಗತ್ತಿನಲ್ಲಿ ಯಾವ ಸಮಾಜ ಸುಲಭಸಾಧ್ಯವಾಗಿ ತನಗೆ ದೊರೆತುದನ್ನು ಅದರ ಬೆಲೆಯರಿತು ದಕ್ಕಿಸಿಕೊಂಡಿದೆ ? ಅಹಿಂಸಾತ್ಮಕ ಹೋರಾಟದ ಫಲವಾಗಿಯೇ ನಮಗೆ ದೊರೆತಿರುವ ಸ್ವಾತಂತ್ರ್ಯದ ಬೆಲೆ ಇಂದು ಸ್ವಾತಂತ್ರ್ಯಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಎಷ್ಟು ಜನ 'ಸ್ವಾತಂತ್ರ್ಯಯೋಧ'ರಿಗೆ ತಿಳಿದಿದೆಯೆಂದು ನೀವು ಎದೆ ತಟ್ಟಿ ಹೇಳಬಲ್ಲಿರಿ? ಈ ಯೋಧರಲ್ಲಿ ಬಹುಸಂಖ್ಯರಿಗೆ ತಿಳಿದಿರುವ ಸ್ವಾತಂತ್ರ್ಯದ ಮತ್ತು ಅದಕ್ಕಾಗಿ ಅವರು ಮಾಡಿದ ತ್ಯಾಗದ ಬೆಲೆ ತಿಂಗಳಿಗೆ ೭೫ ರೂಪಾಯಿ, ಮತ್ತೆ ಕೆಲವರಿಗೆ ೨೦೦ ರೂಪಾಯಿ + ಒಂದೊಂದು ತಾಮ್ರದ ತಗಡು. ಸ್ವಾಮೀ, ಇದು ಅಹಿಂಸಾತ್ಮಕ ಕ್ರಾಂತಿಯ ಫಲ. ಇದೇ ಮಾತನ್ನ ಚೀನಿಯರ, ರಶಿಯನ್ನರ, ಬ್ರಿಟಿಶರ, ಜಪಾನೀಯರ ಅಥವಾ ಇನ್ನಾವುದೇ ಸ್ವಾಭಿಮಾನಿ ಜನಾಂಗದ ಬಗ್ಗೆ ನೀವು ಹೇಳಬಲ್ಲಿರಾ ? ಒಬ್ಬ ತಾಯಿಗೆ ತಾನು ಒಂಬತ್ತು ತಿಂಗಳು ಗರ್ಭದಲ್ಲಿ ಹೊತ್ತು ಪ್ರಸವವೇದನೆಯನ್ನು ಸಹಿಸಿ ಹಡೆದ ಮಗುವಿನ ಬಗ್ಗೆ ಇರುವ ಮಮತೆ ಅಂತಃಕರಣಗಳು ದತ್ತು ತೆಗೆದುಕೊಂಡ ಮಗುವಿನ ಬಗ್ಗೆ ಇರಲು ಶಕ್ಯವೇ ಎಂಬುದನ್ನಾದರೂ ಯೋಚಿಸಿದ್ದೀರಾ ?

ಇಂದು ನಮ್ಮಲ್ಲಿ ಆಗಬಹುದಾದ ಕ್ರಾಂತಿಯು ನನ್ನ, ನಿಮ್ಮಂತಹ ಕೆಲ ಬ್ರಾಹ್ಮಣರ ಬಲಿ ಕೇಳುತ್ತಿದ್ದರೆ ಅದಕ್ಕೇಕೆ ಅಳುಕುತ್ತೀರಿ ? ನಮ್ಮ ದೇಶಕ್ಕೆ, ಸಮಾಜಕ್ಕೆ ಏನಾದರೂ ಒಳಿತಾಗಬೇಕಾಗಿದ್ದರೆ ಅದು ಖುರ್ಚಿಯಲ್ಲಿ ಕುಳಿತು ತಲೆತುರಿಸಿಕೊಳ್ಳುತ್ತ ಲೇಖನಿಯನ್ನೋಡಿಸುವವರ ಬೌದ್ಧಿಕ ಕ್ರಾಂತಿ, ವೈಚಾರಿಕ ಕ್ರಾಂತಿಗಳಿಂದ ಎಂದೂ ಆಗುವುದು ಶಕ್ಯವಿಲ್ಲ. ಅದು ಬರಬೇಕಿರುವುದು ಸಮಾಜದ ಬೇರೆ ಸ್ತರಗಳಿಂದಲೇ. ಅದು ಬಂದಾಗ ಹಿಂಸೆ ಅಹಿಂಸೆಗಳ ಬಗ್ಗೆ ಬಾಯ್ತೆರೆಯಲು ಕೂಡ ನಿಮಗೆ ಸಮಯ ಸಿಕ್ಕಲಿಕ್ಕಿಲ್ಲ. ತಲೆಯಲ್ಲಿದ್ದುದನ್ನು ತೆಗೆದು ಹಾಕುವುದು ನೀವು ತಿಳಿದಷ್ಟು ಅಥವಾ ನೀವು ಹೇಳುವಷ್ಟು ಸುಲಭವಲ್ಲವೆಂಬುದು ನಿಮಗೂ ಗೊತ್ತಿದೆ. ಆದರೆ ಹಾಗೆಂದು ಬಹಿರಂಗವಾಗಿ ಒಪ್ಪಲು ನಿಮಗಾಗುತ್ತಿಲ್ಲವಷ್ಟೆ. ಆದರೆ ನೀವು ನಂಬುವ ವಚನಕಾರರ ಮಾತಿನಲ್ಲೇ ಹೇಳಬೇಕೆಂದರೆ "ಬಾರದು ಬಪ್ಪದು: ಬಪ್ಪುದು ತಪ್ಪದು" ಎಂದಾಗ ಬರ

UPATTAR
T TIPETH.

ಬಹುದಾದುದನ್ನು ನೆನೆದೇ ಇಷ್ಟೇಕೆ ಹೆದರಬೇಕು ? ಬಂದುದನ್ನು ಗಂಡೆದೆಯಿಂದ ಎದುರಿಸೇನೆಂಬ ಆತ್ಮವಿಶ್ವಾಸ ಮುಖ್ಯವೇ ಹೊರತು ಅತಿ ಬುದ್ಧಿವಂತಿಕೆಯ ಸರ್ಕಸ್ (ಇದೇ ಬ್ರಾಹ್ಮಣನ ಹುಟ್ಟುಗುಣವೆಂದು ಇತರರ ಆಪಾದನೆಯಲ್ಲವೆ ?) ಮಾಡುವುದು ವ್ಯರ್ಥ ಕಂಠಶೋಷಣೆ ಅಥವಾ ಲೇಖನಿಯ ಅಪವ್ಯಯ.

■ ■ ■

ಜಿ. ಎಸ್. ಅವಧಾನಿ

ಎರಡು ಕೋಣೆಗಳಲ್ಲಿ ಕನಸು

ಅವನು ಅವಳ
ಮುಖವನ್ನು ಮರೆತುಬಿಡುವುದಕ್ಕೆ
ಪ್ರಯತ್ನಿಸುತ್ತಾನೆ.
ಏಳುತ್ತಾನೆ. ಎದ್ದು
ಬಾಗಿಲಿಗೆ, ಮತ್ತು
ಅಗುಳಿಯ ದನಿಗೆ
ಆಲಿಸುತ್ತಾನೆ.

ಅವಳೂ ಸಹ
ಅವನನ್ನು ನೆನಪಿಸುತ್ತಾ
ಳೆ.
ಹೀಗೇ ಹಾಬೇ ಹಾಬಂ.

ಅವರಿಬ್ಬರೂ ಬಾಗಿಲನ್ನು
ತೆರೆಯುವುದಕ್ಕೆ
ಬಯಸುತ್ತಾರೆ.

ಬಂದೊಮ್ಮೆ ಬಾಗಿಲು ತೆರೆಯಂದಿ
ದ್ದರೆ
ಯಾಕೆಂದರೆ
ಬಾಗಿಲು ಅವರಿಬ್ಬರ ಮಧ್ಯದಲ್ಲಿದೆ.
ಅವರಿಬ್ಬರೂ ಈ ಹಿಂದೆಯೂ, ಮತ್ತೆ
ಈಗಲೂ
ಪರಸ್ಪರ ಬಂದೊಂದು ಬದಿಗೆ.

ತಾವಿಬ್ಬರೂ ಹೊರಗೆ ನಡೆಯಬಲ್ಲೆವೆಂ
ಬುದನ್ನು ಹುಡುಕುತ್ತಾರೆ.

ಅವರಿಬ್ಬರ ಕೈಯೊಳಗೂ
ತಂಪನೆಯ ಹೂಗುಚ್ಛ.
ಸುವಾಸನೆಯ ಧಾತುವಿನಲ್ಲಿ
ಅವನೂ
ಅವಳೂ
ಗಾಢ ನಿದ್ರಾಧೀನ.

(Monroelerner ನ Dream in Two Rooms ದಿಂದ)

■ ■ ■

ರಾಜಶೇಖರ ನೀರಮಾನ್ವಿ

ಇಂದಿನ ಶಿಕ್ಷಣ-ನಿರುದ್ಯೋಗ-ಬಡತನ

ಒಂದು ವಿಶ್ಲೇಷಣೆ

ಇಂದಿನ ಶಿಕ್ಷಣದ ಬಗೆಗೆ ವಿಚಾರ ಮಾಡಬೇಕಾಗಿ ಬಂದದ್ದು, ಸುಶಿಕ್ಷಿತನಾಗಿ ಇಂದಿನ ದುರಂತದ ಭಾಗವಾಗಿರುವದು, ಶಿಕ್ಷಕನಾಗಿ ಹೊಂದಿರುವ ಅನುಭವವೇ ಹೊರತು ಶಿಕ್ಷಣವೇತ್ತನಾಗಿಯಲ್ಲ. ಒಂದು ವಸ್ತುವಿನ ಬೆಲೆಯನ್ನು ಹೆಚ್ಚಿಸಲು ನಾವು ಅದರೊಳಗಿನ ಕೀಳುಭಾಗಗಳನ್ನು ತೆಗೆದುಹಾಕಿ ಅದನ್ನು ಸಂಸ್ಕರಿಸುತ್ತೇವೆ. ಆಗ ಆ ವಸ್ತು ತನ್ನ ವರ್ಗದ ಅತ್ಯುತ್ತಮ ಭಾಗವಾಗುವದೇ ಅಲ್ಲದೆ ತನ್ಮೂಲಕ ತನ್ನ ಗುಂಪಿನ ಗುಣಮಟ್ಟವನ್ನು ಹೆಚ್ಚಿಸುವದರ ಜೊತೆಗೆ ತನ್ನ ಗುಂಪಿನಲ್ಲಿ ಅತಿಬೇಗ ಬೆರೆತು ಹೋಗುತ್ತದೆ.

ಈ ನಿಯಮವನ್ನು ನಾವು ಶಿಕ್ಷಣಕ್ಕೆ ಅನ್ವಯಿಸಿದಾಗ ನಮಗೆ ಕಾಣುವದೇನು? ಸುಶಿಕ್ಷಿತರಾಗಿ ಮಾನವ ವರ್ಗದ ಅತ್ಯುತ್ತಮ ಭಾಗವಾಗಬೇಕಾಗಿದ್ದ ನಾವು ಮಾನವ ಜನಾಂಗದ ಕತ್ತರಿಸಿ ಹೋದ ಅಂಗವಾಗಿ ಪರಸ್ಪರ ಹೊಂದಾಣಿಕೆಯಿಲ್ಲದ ನಿರುಪಯೋಗಿಗಳಾಗಿದ್ದೇವೆ. ಸಂಸ್ಕಾರವಂತರಾದ ನಮ್ಮಿಂದ ಎರಡು ರೀತಿಯ ನಿಶ್ಚಿತ ಪರಿಣಾಮಗಳುಂಟಾಗಬೇಕು. ಸುಶಿಕ್ಷಿತ ವ್ಯಕ್ತಿಯಿಂದ ಸಮಾಜದಲ್ಲಿನ ಶಿಕ್ಷಣದ ಶೇಕಡಾವಾರು ಮೌಲ್ಯ ಹೆಚ್ಚಾಗುವದರ ಮೂಲಕ ಸುತ್ತ ಮುತ್ತಣ ವಾತಾವರಣದಲ್ಲಿ ಶಿಕ್ಷಣದ ಬಗೆಗಿನ ಪ್ರಜ್ಞೆಯೂ ಮೂಡಬೇಕು.

ನಮ್ಮಲ್ಲಿ ಅಕ್ಷರವಂತರ ಸಂಖ್ಯೆಯೇನೋ ಹೆಚ್ಚಾಗಿದೆ. ಅದರಿಂದ ಉಂಟಾಗಬೇಕಾದ ಸತ್ಪರಿಣಾಮ ನಮ್ಮ ಜನಾಂಗದ ಮೇಲೆ, ಸಮಾಜದ ಮೇಲೆ ಆಗಿದೆಯೇ ಎಂದು ವಿಚಾರಿಸಿದಾಗ ನಮಗೆ ಕಾದಿರುವದು ನಿರಾಶೆಯೇ. ಜನಾಂಗದ, ಸಮಾಜದ ಭಾಗವಾಗಿದ್ದ ಒಂದು ವ್ಯಕ್ತಿ ಅಕ್ಷರಸ್ಥನಾದ ಕೂಡಲೇ

ತನ್ನ ಜನಾಂಗದ, ಸಮಾಜದ ಭಾಗವಾಗಲಾರ. ಆದ್ದರಿಂದ ಇಂದಿನ ಶಿಕ್ಷಣ, ಶಿಕ್ಷಣವಲ್ಲ. ಅದೊಂದು ವ್ಯಕ್ತಿಗಳನ್ನು ಅಕ್ಷರಸ್ಥರನ್ನಾಗಿ ಮಾಡುವ ಉದ್ಯಮ. ಒಬ್ಬ ವ್ಯಕ್ತಿಯ ಸರ್ವಾಂಗೀಣ ಪ್ರಗತಿ, ಅವನಲ್ಲಿರುವ ಮೌಲ್ಯಗಳ ಗಟ್ಟಿಗೊಳ್ಳುವಿಕೆ ಮತ್ತು ಅವುಗಳ ಮಟ್ಟ ಉತ್ತಮಗೊಳ್ಳುವಿಕೆ ಎನ್ನುವದರ ಅರ್ಥವ್ಯಾಪ್ತಿಯನ್ನೇ ಕಳೆದುಕೊಂಡಿದೆ ಇಂದಿನ ನಮ್ಮ ಶಿಕ್ಷಣ.

ಶಿಕ್ಷಣದಿಂದುಂಟಾಗುವ ಇಂದಿನ ಸಮಾಜದ ಶಿಥಿಲೀಕರಣ (Disintegration) ತಾತ್ಕಾಲಿಕವಿರಬಹುದೆಂದು ಎಂದೆನಿಸಿದರೂ ಅದಕ್ಕೆ ಪುರಾತನ ಹಿನ್ನೆಲೆಯೂ ಇದೆ. ನಮ್ಮಲ್ಲಿಯ ಶಿಕ್ಷಣ ಪ್ರಾರಂಭದ ದೆಸೆಯಿಂದಲೂ ಅಂದರೆ ಸುಮಾರು ಐದುಸಾವಿರ ವರ್ಷಗಳ ಹಿಂದಿನಿಂದಲೂ ಸಾಮಾನ್ಯ ಜನಜೀವನದ ಭಾಗವಾಗಿರಲೇ ಇಲ್ಲ ಅಥವಾ ಸುಶಿಕ್ಷಿತ ಜನಜೀವನದ ಭಾಗವಾಗಿರಲಿಲ್ಲ. ಈ ಮಾನಸಿಕ ಹಿನ್ನೆಲೆಯೇ ಸುಶಿಕ್ಷಿತನನ್ನು ಅವನ ಸಮಾಜದಿಂದ ಬೇರ್ಪಡಿಸುತ್ತಿರುವದು.

ಮತ್ತೊಂದು ಕಾರಣವೆಂದರೆ ಹಿಂದಿನ ಕಾಲದಂತೆಯೇ ಇಂದಿಗೂ ಬೌದ್ಧಿಕ ವ್ಯಾಪಾರದಲ್ಲಿ ತೊಡಗಿರುವವರ ಆಸಕ್ತಿ ಪರಂಪರೆಗಳೇ ಶಿಕ್ಷಣದ ಭಾಗವಾಗಿರುವದು. ಜನಸಾಮಾನ್ಯನ ಆಸಕ್ತಿಗಳಾದ ದೈಹಿಕ ಚಟುವಟಿಕೆಗಳು, ಕಾರ್ಯಕ್ಷಮತೆ ಇತ್ಯಾದಿಗಳು ಬೌದ್ಧಿಕ ನೈಪುಣ್ಯದ ಜೊತೆಗೆ ಸರಿಸಮನಾಗಿ ಶಿಕ್ಷಣದ ಭಾಗವಾಗಿಲ್ಲ. ನಮ್ಮ ಶಿಕ್ಷಣದ ಸರ್ವಭಾರವನ್ನು ಹೊತ್ತವರು ಬೇಕೆಂದೇ ಇವುಗಳನ್ನು ಪಾಠ ಪಟ್ಟಿಯಲ್ಲಿ ಸೇರಿಸಿಲ್ಲ. ಸೇರಿಸಿದರೆ ಶ್ರಮಜೀವಿಗಳೂ ಶಿಕ್ಷಣದಲ್ಲಿ ಆಸಕ್ತಿ ಹೊಂದಿ, ಸುಶಿಕ್ಷಿತರಾಗಿ ತಮ್ಮ ಏಕಸ್ವಾಮ್ಯವನ್ನು ದೂರಮಾಡಬಹುದೆನ್ನುವ ಆತಂಕ ಒಂದೆಡೆ; ಇನ್ನೊಂದು ಕಡೆಗೆ ಬೌದ್ಧಿಕ ವ್ಯಾಪಾರದಲ್ಲಿಯೇ ತೊಡಗಿದವನಿಗೆ ದೈಹಿಕ ಸ್ಪರ್ಧೆ ಕಠಿಣವಾಗಿ ಜನಸಾಮಾನ್ಯ-ಸ್ಪರ್ಧಿಗಿಂತ ಹಿಂದುಳಿಯುತ್ತಾನೆ. ಆಗ ಜನಸಾಮಾನ್ಯನಿಗೆ ಸುಶಿಕ್ಷಿತನ ಬಗೆಗಿರುವ ಮಾನಸಿಕ ದಾಸ್ಯ ಇಲ್ಲವಾಗಿ ಹೊಟ್ಟೆಪಾಡಿಗಾಗಿ ಬುದ್ಧಿಜೀವಿಗಳೂ ದೈಹಿಕ ಶ್ರಮಕ್ಕಿಳಿಯಲೇಬೇಕಾಗುತ್ತಿತ್ತು. ಈ ಹಿಂದಿನ ಪದ್ಧತಿ ಸುಧಾರಿತ ರೂಪದಲ್ಲಿ ಇಂದಿಗೂ ನಮ್ಮ ಶಿಕ್ಷಣದಲ್ಲಿ ಮುಂದುವರಿದಿದೆ.

ಮೂರನೆಯ ಕಾರಣ ಶಿಕ್ಷಣ ಮಾಧ್ಯಮ. ಅದು ಯಾವಾಗಲೂ ಜನಸಾಮಾನ್ಯನ ಭಾಷೆಯೇ ಆಗದಿರುವದು ಸುಶಿಕ್ಷಿತರ ಜನಸಾಮಾನ್ಯರ ನಡುವಿನ

[illegible] ಅತಿ ದೊಡ್ಡ ಕಾರಣ. [illegible] ಸಂಸ್ಕೃತದ ಸ್ಥಾನದಲ್ಲಿ ಇಂದು ಇಂಗ್ಲಿಷ ರಾರಾಜಿಸುತ್ತಿದೆ.

ಇವುಗಳ ಜೊತೆಗೆ ಅಕ್ಷರಸ್ಥರು ಅತಿ [illegible] ಪರಂಪರಾನುಗತ ಜೀವನವಾದರೆ ಶ್ರಮಜೀವಿಗಳು [illegible] ತುಂಬಿದ [illegible]. ಅಶಿಕ್ಷಿತನೆಂದರೆ [illegible] ಸುಶಿಕ್ಷಿತ (?) [illegible]. [illegible] ಪ್ರತಿಫಲ [illegible] ಬೌದ್ಧಿಕ [illegible] ತನ್ನ [illegible] ಶಿಕ್ಷಿತ [illegible]. [illegible] ಬೌದ್ಧಿಕ, ದೈಹಿಕ [illegible].

ನಮ್ಮ ದೇಶ ಬ್ರಿಟಿಷರ ಆಳ್ವಿಕೆಗೆ [illegible] ಶಿಕ್ಷಿತ, ಅಶಿಕ್ಷಿತರ ನಡುವೆ [illegible]. ಬ್ರಿಟಿಷರು ತಮ್ಮ [illegible], ತಮ್ಮ [illegible] ವಿಭಾಗಗಳನ್ನು [illegible] ಶಿಕ್ಷಣ ಪದ್ಧತಿಯಿಂದ ಶಿಕ್ಷಿತ, ಅಶಿಕ್ಷಿತರ [illegible]. ಶಿಕ್ಷಣದೊಂದಿಗೆ [illegible] ಭಾವನೆಗಳ ಜೊತೆಗೆ [illegible] ಬ್ರಿಟಿಷರಿಗೆ ಬೇಕಾದದ್ದೇ ಅದು.

ನಾವು ಸ್ವತಂತ್ರರಾಗಿ ೨೭ ವರ್ಷಗಳ ನಂತರವೂ ಇದೇ ಪರಿಸ್ಥಿತಿ ಮುಂದುವರಿಯಲು ಕಾರಣಗಳಿಲ್ಲ. ನಮ್ಮ ದೇಶದ ಪರಿಸ್ಥಿತಿಗೆ, ಜನಾಂಗದ [illegible] ತಕ್ಕಂತಹ ಶಿಕ್ಷಣ ಪದ್ಧತಿಯನ್ನು ನಾವು [illegible]. ಬ್ರಿಟಿಷರಿಂದ ಅಧಿಕಾರ [illegible] ಜನರಿಗೆ ಬೇಕಾದದ್ದು [illegible], ಪ್ರಜಾತಂತ್ರದ [illegible] ಅಧಿಕಾರದ [illegible]. [illegible], ಅಶಿಕ್ಷಿತ [illegible] ಪ್ರಜಾಪ್ರಭುತ್ವದ ಉನ್ನತ [illegible]. [illegible] ಉನ್ನತ [illegible] ಶಿಕ್ಷಣ [illegible]

ಕೂಡಲೇ ನಮ್ಮ ಮೊದಲ ಕೆಲಸ ನೌಕರಿಯ ಬೇಟೆ. ನೌಕರಿಗಾಗಿ ನಮ್ಮ ಪದವಿಗಳ ಗೌರವ ಕಡೆಗಣಿಸಿ ಕಂಡವರ ಕಾಲು ಹಿಡಿದು ನೌಕರಿಯೊಂದನ್ನು ಗಿಟ್ಟಿಸಿದರೆ ನಮ್ಮ ಜೀವನ ಸಾರ್ಥಕವೆಂದೇ ನಮ್ಮ ಭಾವನೆ. ನೌಕರಿಯಲ್ಲಿ ಜನಸಾಮಾನ್ಯನಷ್ಟು ಕಷ್ಟಪಡದ ನಮ್ಮ ಜೀವನದ ನಿರಂತರ ಹೋರಾಟವೆಂದರೆ ನಮ್ಮ ಶ್ರಮವನ್ನು ಆದಷ್ಟು ಕಡಿಮೆಗೊಳಿಸಿಕೊಂಡು ಆದಾಯವನ್ನು ಹೆಚ್ಚಿಸಿಕೊಳ್ಳುವದು. ಈ ಭರದಲ್ಲಿ ನಾವು ಜನಸಾಮಾನ್ಯನಿಗೆ ಗಾವುದ ದೂರವಿರುವ ಅಧಿಕಾರ, ಐಶ್ವರ್ಯಗಳನ್ನು ಓಲೈಸುವೆವಲ್ಲದೆ ದಾಸ್ಯ ಬಡತನಗಳನ್ನಲ್ಲ. ಹೀಗೆ ಜನಸಾಮಾನ್ಯರಿಂದು ವೃತ್ತಿರಾಜಕಾರಣಿಗಳ ಕುತಂತ್ರಗಳಿಗೆ ಬಲಿಯಾಗುತ್ತಲೆ ಹೋಗುತ್ತಾನೆ. ಸುಶಿಕ್ಷಿತ ತನ್ನ ಹೊಟ್ಟೆಪಾಡಿಗೆ ನೌಕರಿಗೆ, ತನ್ಮೂಲಕ ಅಧಿಕಾರ ಐಶ್ವರ್ಯಗಳ ಅಡಿಯಾಳಾಗಿರುವವರೆಗೆ; ಪ್ರಜಾಪ್ರಭುತ್ವ ಯಜ್ಞದಲ್ಲಿ ಪ್ರಜೆಯನ್ನು ಬಲಿಪಶುವನ್ನಾಗಿ ಪರಿವರ್ತಿಸುವ ಕಟುಕನ ಪಾತ್ರ ನಿರ್ವಹಿಸಲೇಬೇಕಾಗುತ್ತದೆ.

* * * *

ಉದ್ಯೋಗದ ಬೇಟೆಯಲ್ಲಿ ತೊಡಗಿದ್ದ ಸ್ನಾತಕೋತ್ತರ ಪದವೀಧರ ಗೆಳೆಯರೊಬ್ಬರ ಭೇಟಿಯಾಗಿತ್ತು. ಮಾತಿಗೆ ಬಂದಾಗ ಅವರ ಮನೆತನದ ಉದ್ಯೋಗವೇನೆಂದು ಕೇಳಿದಾಗ ನೇಕಾರಿಕೆ ಎಂದು ಹೇಳಿದರು. ಅದೇ ಉದ್ಯೋಗವನ್ನೇ ಮುಂದುವರಿಸಬಹುದಲ್ಲ ಎಂದು ಕೇಳಿದಾಗ, ಅವರ ಮನೆತನ ಆ ಉದ್ಯೋಗ ಬಿಟ್ಟು ಎಷ್ಟೋ ಕಾಲವಾಗಿದ್ದು, ಆ ಉದ್ಯೋಗದ ಮೊದಲಕ್ಷರಗಳೂ ಗೊತ್ತಿಲ್ಲವೆಂದರು. ತಲೆತಲಾಂತರಗಳಿಂದ ಮನೆತನದ ಜೀವನಾಧಾರವಾಗಿದ್ದ ಒಂದು ಉದ್ಯೋಗ, ಮೂಲಉತ್ಪಾದನೆಯಿಂದ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಬಹುದಾದ ಉದ್ಯೋಗದಿಂದ ಒಂದು ಸಂಸಾರವಷ್ಟೇ ಅಲ್ಲ ನಮ್ಮ ದೇಶವೇ ವಂಚಿತವಾಗಬೇಕಾಯಿತು. ಇದಕ್ಕೆ ಕಾರಣ ನಮ್ಮ ನೌಕರಿಯ ಮೋಹ.

ಇದು ಒಂದು ಮನೆತನದ ಕತೆಯಲ್ಲ. ಒಂದು ಉದ್ಯೋಗದ ಕತೆಯೂ ಅಲ್ಲ. ನೌಕರಿ ಹಿಡಿದ ಇಂದಿನ ಯುವಕರನ್ನು ತೆಗೆದುಕೊಂಡರೆ ಅವರಲ್ಲಿ ಶೇಕಡಾ ಐವತ್ತರಷ್ಟಾದರೂ, ತಮ್ಮ ಮನೆತನದ ಉದ್ಯೋಗಕ್ಕೆ ಶಾಶ್ವತವಾಗಿ ಶರಣು ಹೊಡೆದು ನೌಕರಿಯ ಮೊರೆಹೊಕ್ಕವರು ಸಿಕ್ಕುತ್ತಾರೆ. ಈ ಜನಗಳ

ಸಂತಾನ ಮುಂದೆ ಕಾಲಾನುಕಾಲದವರೆಗೆ ಜೀವನೋಪಾಯಕ್ಕಾಗಿ ಕಂಡವರ ಕಾಲು ಹಿಡಿವ ಸ್ಥಿತಿ.

ಹೊಟ್ಟೆ ಹೊರೆಯಲು ಮನೆತನದ ಉದ್ಯೋಗವಿದ್ದರೂ ಸುಶಿಕ್ಷಿತರಾದ ನಾವು ಅದಕ್ಕೆ ಶಾಶ್ವತ ಶರಣು ಹೊಡೆದು ನೌಕರಿಯ ಬೆನ್ನು ಹತ್ತಬೇಕಾದರೆ ಅದರಲ್ಲಿರುವ ಆಕರ್ಷಣೆಯಾದರೂ ಏನಿರಬಹುದು? ಜೀವನವಿಡೀ ಸಂತಾನದ ಯೋಗಕ್ಷೇಮದ ಭಾರವನ್ನು ಹೊರಬಲ್ಲಂಥ ಉದ್ಯೋಗ ಒಂದು ಕಡೆಯಾದರೆ ಇನ್ನೊಂದು ಕಡೆಗೆ ತನ್ನ ಜೀವನದೊಂದಿಗೇ ಕೊನೆಗೊಂಡು ಮುಂದೆ ಇಡೀ ಸಂತಾನವನ್ನೇ ಬೀದಿಪಾಲು ಮಾಡುವ ನೌಕರಿ. ಆದರೂ ನಮ್ಮೆಲ್ಲರ ಒಲವು ನೌಕರಿಯ ಕಡೆಗೇ.

ನೌಕರಿಯ ಆಕರ್ಷಣೆಯ ಜೊತೆಗೇ, ನಮ್ಮ ಮನೆತನದ ಉದ್ಯೋಗದ ಬಗೆಗಿರುವ ನಮ್ಮ ಅನಾಸಕ್ತಿ. ಇದಕ್ಕೆ ಕಾರಣ ಉದ್ಯೋಗಕ್ಕೆ ಮತ್ತು ಜಾತಿಗೆ ಇರುವ ಬಿಡಿಸಲಾಗದ ಗಂಟು. ಪ್ರತಿಯೊಂದು ಉದ್ಯೋಗವನ್ನು ಜಾತಿಯ ಚೌಕಟ್ಟಿನಲ್ಲಿರಿಸಿ ಅದಕ್ಕೆ ತಕ್ಕಂತಹ ಅಂತಸ್ತನ್ನು ಕಲ್ಪಿಸಿ ಅದನ್ನು ಶತಮಾನಗಳಿಂದಲೂ ಪಾಲಿಸಿಕೊಂಡು ಬಂದಿದ್ದೇವೆ. ದೈಹಿಕ ಶ್ರಮ ಅತ್ಯಂತ ಕೀಳು. ದೈಹಿಕ ಶ್ರಮವಿಲ್ಲದೆ ಜೀವನ ಸಾಗಿಸುವವರೇ ಅತ್ಯಂತ ಶ್ರೇಷ್ಠರೆಂದು ಸಾವಿರಾರು ವರ್ಷಗಳಿಂದ ನಂಬಿದ್ದೇವೆ. ಈ ಹಿನ್ನೆಲೆಯನ್ನು ಹೊಂದಿ ನಾವಿಂದು ನಮ್ಮ ಉದ್ಯೋಗದ ಮೇಲಿನಿಂದ ಒಕ್ಕಲಿಗ, ನೇಕಾರ, ಹಜಾಮ, ಮೋಚಿ ಇತ್ಯಾದಿಯಾಗಿ ಕರೆಸಿಕೊಳ್ಳಲು ನಾಚಿಕೆಪಡುತ್ತೇವೆ. ಕಾರಣ ಅವೆಲ್ಲವೂ ನಮ್ಮ ಜಾತಿಯನ್ನು ಸೂಚಿಸುತ್ತವೆ. ಉತ್ತಮ ಜಾತಿಯಲ್ಲಿ (ಉದ್ಯೋಗದ ಅರ್ಥದಲ್ಲಿ) ಹುಟ್ಟಿದರೂ ಬೂಟು ಚಪ್ಪಲಿಗಳ ಅಂಗಡಿಗಳಲ್ಲಿ ನೌಕರಿಯನ್ನಾದರೂ ಮಾಡೇವು; ಜಾತಿಸೂಚಕವಾದ ಮನೆತನದ ಉದ್ಯೋಗವನ್ನಲ್ಲ.

ಎಲ್ಲರನ್ನೂ ಬಿಟ್ಟು ಯಾವನೋ ಒಬ್ಬನ ಹಿಂದೆ ಓಡಿಹೋಗಿ ಮರಳಿ ಬಂದ ಹೆಂಗಸಿನಂತಾಗಿದೆ ಸುಶಿಕ್ಷಿತರಾದ ನಮ್ಮೆಲ್ಲರ ಪಾಡು. ಪಾವನಳಿದ್ದರೂ ಅವಳು ಪತಿತೆ ಸಮಾಜದ ದೃಷ್ಟಿಯಲ್ಲಿ. ಪದವಿ ಶಿಕ್ಷಣ ಪಡೆದು ನಮ್ಮ ಮನೆತನದ ಉದ್ಯೋಗ ಮುಂದುವರಿಸಲು ಹಳ್ಳಿಯಲ್ಲಿಯೇ ನೆಲೆಸಲು

ಯುತ್ತಿಸುವ ನಾವು ನಮ್ಮ ಪ್ರಯುಕ್ತಿಗಳೂ ಜನಜೀವನದೊಡನೆ ಒಂದಾಗುವದು ಕಷ್ಟದ ಮಾತೆನಿಸುತ್ತದೆ. ಅಲ್ಲಿಗೂ ನಾವು ಬಲವಂತವಾಗಿ ಮುಂದುವರಿದಾಗ ನಮಗಾಗುವ ಅನುಭವ ಇನ್ನೂ ತಿರಸ್ಕರಣ. ಸಾರ್ವಜನಿಕ ಜೀವನದಲ್ಲಿ ಶಿಕ್ಷಣಕ್ಕೆ ಕವಡೆಯ ಬೆಲೆಯೂ ಇಲ್ಲ. ಅಲ್ಲಿ ಬೆಲೆ ಇರುವದೊಂದಕ್ಕೇ, ಅದು ಹಣ. ಸ್ನಾತಕೋತ್ತರ ಪದವಿ ಪಡೆದ ನಾವು ಸಾರ್ವಜನಿಕ ಜೀವನದಲ್ಲಿ, ವಿದ್ಯೆಯ ಗಂಧವೇ ಇಲ್ಲದ ನೌಕರರಿಗೆ ಲಂಚ ಕೊಡುತ್ತಾ ಅವರ ಗುಣಗಾನ ಮಾಡುತ್ತಾ ನಮ್ಮ ಆತ್ಮಾಭಿಮಾನವನ್ನು ಒತ್ತೆ ಇಡಬೇಕಾಗಿ ಬರುತ್ತದೆ. ನಮ್ಮ ಶಿಕ್ಷಣದಲ್ಲಿ ಅಕ್ಷರ ಜ್ಞಾನವೊಂದನ್ನು ಬಿಟ್ಟು ಯಾವ ಮಾನವೀಯ ಮೌಲ್ಯಗಳಿಗೂ ಸ್ಥಾನವಿಲ್ಲದಿರುವದೇ ಈ ವಿಪರ್ಯಾಸಕ್ಕೆ ಕಾರಣ.

ಇದಾವುದರ ಗೊಡವೆಯೇ ಬೇಡವೆಂದು ನೌಕರಿಯ ಬೆನ್ನುಹತ್ತಿದರೆ ನಮಗೆ ಎದುರಾಗುವದು ಇನ್ನೂ ಕಹಿ ಅನುಭವ. ಕಂಡವರ ಕಾಲುಹಿಡಿದು, ಕೇಳಿದಷ್ಟು ಲಂಚ ತೆತ್ತು ನೌಕರಿಯೆನ್ನುವದೊಂದನ್ನು ಹಿಡಿದರೆ ಜೀವನ ಸಾರ್ಥಕ ವೆಂದು ಭಾವಿಸಿದ ನಮಗೆ ನೌಕರಿ ದೊರೆತಾಗ ಭ್ರಮ ನಿರಸನವಾಗುತ್ತದೆ. ನೌಕರಿಯೊಂದಿಗೇ ಮೇಲು ಕೀಳುಗಳ ಹೋರಾಟ, ಇನ್ನೊಬ್ಬರ ತಲೆಮೇಲೆ ಕಾಲಿಟ್ಟು ಮೇಲಿನ ಹಂತಗಳಿಗೆ ಜಿಗಿಯುವ ಸ್ಪರ್ಧೆ. ಈ ಭರದಲ್ಲಿ ನಮಗೆ ಕಾಣುವದೊಂದೇ, ಸರ್ವರೋಗಗಳ ಸಂಜೀವಿನಿಯಾದ ಹಣ. ಉರಿಯುವ ಮನೆಯಲ್ಲಿ ಹಿರಿದಷ್ಟೇ ಲಾಭವೆನ್ನುವಂತೆ, ನೌಕರಿಯ ಅವಧಿಯಲ್ಲಿ ಅದಷ್ಟು ದುಡ್ಡು ಮಾಡುವದೊಂದೇ ಪರಮಗುರಿ.

ಅಕ್ಷರ ಜ್ಞಾನವೇ ಶಿಕ್ಷಣವಾದ ಈ ದಿನಗಳಲ್ಲಿ ಶಿಕ್ಷಣ ಮುಗಿಸಿ ಬಂದಾಗ ನೌಕರಿಯೊಂದನ್ನು ಬಿಟ್ಟು ಬೇರಾವ ಭವಿಷ್ಯವೂ ನಮಗೆ ಕಾಣುವದಿಲ್ಲ. ಪ್ರತಿ ವರ್ಷವೂ ಲಕ್ಷಗಟ್ಟಲೆ ಅಕ್ಷರಸ್ಥರನ್ನು ತಯಾರು ಮಾಡುವ ಕಾರಖಾನೆಗಳು ನಮ್ಮ ಶಾಲಾ ಕಾಲೇಜುಗಳು. ಓದುವದು ಬರೆಯುವದನ್ನು ಬಿಟ್ಟು ಬೇರೇನೂ ಕಲಿಯದ ನಾವು ಮುಂದೆ ಅದಕ್ಕೆ ತಕ್ಕ ನೌಕರಿಯನ್ನೇ ಬಯಸುತ್ತೇವೆ. ನಮ್ಮ ಅಗತ್ಯಗಳನ್ನು ಪೂರೈಸಲು ಲಕ್ಷಗಟ್ಟಲೆ ಕಾರಕೂನಿಕೆಯ ಹುದ್ದೆಗಳೇ ಸೃಷ್ಟಿಯಾಗಬೇಕು. ಇಂಥ ಉದ್ಯೋಗವನ್ನು ಮಾಡಿ ನಾವೆಲ್ಲ ಮಾಡುವ ಉತ್ಪಾದನೆಯೆಂದರೆ ಫೈಲುಗಳು. ಫೈಲುಗಳ ವೃದ್ಧಿಯಿಂದ ಯಾವ ರಾಷ್ಟ್ರದ ಸಾಂಪತ್ತಿಕ ಸ್ಥಿತಿ ಉತ್ತಮಗೊಂಡೀತು ?

ಇಂದಿನ ಶಿಕ್ಷಣದ ಪರಿಣಾಮವೇನೆಂದರೆ ಶಿಕ್ಷಣ ಪಡೆದ ಒಕ್ಕಲಿಗನ ಮಗ ಒಕ್ಕಲಿಗನಾಗಲಾರ; ಮೋಚಿಯ ಮಗ, ಕಮ್ಮಾರನ ಮಗ, ಬಡಗಿ, ನೇಕಾರ ಇತ್ಯಾದಿ ಉದ್ಯೋಗಸ್ಥರ ಮಕ್ಕಳೆಲ್ಲರೂ ತಮ್ಮ ತಮ್ಮ ಉದ್ಯೋಗಗಳನ್ನು ಮುಂದುವರಿಸಿಕೊಂಡು ಹೋಗಲಾರರು. ಈ ಅನಾಸಕ್ತಿಯಿಂದ ಇವೆಲ್ಲಾ ಉದ್ಯೋಗಗಳಿಗೂ ಕುಶಲಕರ್ಮಿಗಳ ಅಭಾವದಿಂದ ಮರಣಾಂತಕ ಪೆಟ್ಟು. ಇನ್ನೊಂದು ಕಡೆ ಅಕ್ಷರಸ್ಥರಾದ ಈ ಉದ್ಯೋಗದ ಮಕ್ಕಳು ಪ್ರತಿವರ್ಷವೂ ಅಕ್ಷರಸ್ಥ ನಿರುದ್ಯೋಗಿಗಳ ಪಡೆಯನ್ನೇ ನಿರ್ಮಿಸುತ್ತಿದ್ದಾರೆ. ಈ ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಇನ್ನು ೧೦–೧೨ ವರ್ಷಗಳಲ್ಲಿ ಎಲ್ಲ ಮಕ್ಕಳೂ ಕನಿಷ್ಠ ಅಕ್ಷರವಂತರಾದರೆ ದೈಹಿಕ ಶ್ರಮವನ್ನವಲಂಬಿಸಿದ ಒಕ್ಕಲುತನ, ಕೈಗಾರಿಕೆ, ಗೃಹ ಉದ್ಯೋಗಗಳು ಇವೆಲ್ಲವೂ ಸಂಪೂರ್ಣ ನಿಂತುಹೋಗಿ, ಬರಿಯ ಫೈಲುಗಳನ್ನೇ ತಿಂದು ನಾವು ಜೀವಿಸಬೇಕಾಗುತ್ತದೆ.

ಈಗಾಗಲೇ ನೂರಕ್ಕೆ ಐವತ್ತರಷ್ಟು ಗೃಹಕೈಗಾರಿಕೆಗಳೆಲ್ಲವೂ ಮಾಯವಾಗಿಬಿಟ್ಟಿವೆ. ದಿನನಿತ್ಯದ ಜೀವನಕ್ಕೆ, ಉದ್ಯೋಗಗಳಿಗೆ ಅತ್ಯಗತ್ಯವಾದ ಕನಿಷ್ಠ ಉಪಕರಣಗಳಾದ ಹಗ್ಗ, ಗುದ್ದಲಿ, ಸಲಿಕೆ, ಗಡಿಗೆ, ಮಡಕೆಗಳು ಇತ್ಯಾದಿಗಳೆಲ್ಲವಕ್ಕೂ ನಾವು ಪೇಟೆಯ ಮುಖ ನೋಡತೊಡಗಿದ್ದೇವೆ. ಕನಿಷ್ಠ ಅಕ್ಷರವಂತರಾದ ಈ ಜನ ಜಾತಿಸೂಚಕವಾದ ತಮ್ಮ ಉದ್ಯೋಗಗಳನ್ನು ತ್ಯಜಿಸಿ ನಾಗರಿಕತೆಯತ್ತ ಮುಖತಿರುವಿರುವುದರ ಪರಿಣಾಮವೇ ಇದು. ಮುಂಬರುವ ದಿನಗಳಲ್ಲಿ ನಮ್ಮ ಕುಂಟೆ, ಕೂರಿಗೆಗಳಿಗೆ, ಮಗ್ಗಗಳಿಗೆ ಚಕ್ಕೆ ಬಡಿಯಬೇಕಾದರೆ ಒಬ್ಬ ಇಂಜಿನಿಯರ್ ಬೇಕಾಗುತ್ತದೆ. ಗಡಿಗೆ ಮಡಕೆಗಳೆಲ್ಲವೂ ಕಾರ್ಖಾನೆಗಳಲ್ಲಿ ತಯಾರಾಗಿ ಬರುತ್ತವೆ. ಜನಜೀವನದ ಮೂಲ ಅವಶ್ಯಕತೆಗಳನ್ನು ಪೂರೈಸಬಲ್ಲ ಯಾವ ಉದ್ಯೋಗವೂ ಹಳ್ಳಿಗಳಲ್ಲಿರುವುದಿಲ್ಲ.

ಬಡತನ ಹೆಚ್ಚಾಗಲು ಇರುವ ಅನೇಕ ಕಾರಣಗಳಲ್ಲಿ, ಇಂದಿನ ಶಿಕ್ಷಣ ಪದ್ಧತಿಯಿಂದಾದ ವರ್ಗಗಳ ಸೃಷ್ಟಿ, ಒಂದು ಕಡೆ ಜನಸಾಮಾನ್ಯರನ್ನು ಶಾಶ್ವತವಾಗಿ ಅಜ್ಞಾನದಲ್ಲಿರಿಸಿ ಅವರನ್ನು ಶೋಷಿಸುವ ರಾಜಕಾರಣಿಗಳ, ಪುಢಾರಿಗಳ, ಶ್ರೀಮಂತ ವರ್ಗ. ಇನ್ನೊಂದು ಕಡೆ ಇವರೆಲ್ಲರ ಶ್ರೀಮಂತಿಕೆಯನ್ನು ಹೆಚ್ಚಿಸಿ ತನ್ನ ಬಡತನವನ್ನು ವೃದ್ಧಿಗೊಳಿಸಿಕೊಳ್ಳುವ ಅಶಿಕ್ಷಿತ ಜನಸಾಮಾನ್ಯವರ್ಗ.

ಇವುಗಳ ಮಧ್ಯೆ ಬಡಜನತೆಯನ್ನು ಶೋಷಣೆಯ ಬಲಿಪಶುವನ್ನಾಗಿ ಸಿದ್ಧಪಡಿಸುವ ದಲ್ಲಾಳಿಯ ಪಾತ್ರ ಸುಶಿಕ್ಷಿತರೆನಿಸಿಕೊಂಡಿರುವ ನಮ್ಮದು.

ಮೇಲ್ಜಾತಿ, ಶ್ರೀಮಂತಿಕೆ ಮತ್ತು ಇಂಗ್ಲಿಷ್ ಜ್ಞಾನ ಈ ಮೂರರಲ್ಲಿ ಎರಡನ್ನು ಯಾರು ಹೊಂದಿರುವರೋ ಅವರು ದೇಶದ ಆಡಳಿತ ವರ್ಗದಲ್ಲಿ ಸೇರಿಕೊಳ್ಳಲು ಅರ್ಹತೆ ಪಡೆಯುತ್ತಾರೆ. ಅಂಥ ಜನಗಳ ಸಂಖ್ಯೆ ಸುಮಾರು ೩೦ ಲಕ್ಷ ಇದ್ದೀತು. ಈ ೩೦ ಲಕ್ಷ ಭಾರತೀಯರು ಸುಮಾರು ೫೦ ಕೋಟಿ ಸ್ವದೇಶೀಯರ ಎದೆಯ ಮೇಲೆ ಕೂತು ಹತ್ತಿಕ್ಕಿದ್ದಾರೆ ಎಂದು ಡಾ. ಲೋಹಿಯಾ ಹೇಳಿದ್ದಾರೆ (ಲೋಹಿಯಾ : ಪು. ೧೫). ಜಾತ್ಯತೀತ ರಾಷ್ಟ್ರದಲ್ಲಿ ಈ ಮಾತು ವಿಚಿತ್ರವೆನಿಸಬಹುದಾದರೂ ವಾಸ್ತವಾಂಶವನ್ನು ಪರಿಶೀಲಿಸಿದಾಗ ಅದರ ಸತ್ಯತೆಯ ಅರಿವು ನಮಗಾಗುತ್ತದೆ.

ನಾವು ಮೇಲ್ಜಾತಿಯವರಾಗಿದ್ದರೆ ನಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಿಸುವ ತಿಳುವಳಿಕೆ ಅನುಕೂಲತೆ ನಮಗಿರುತ್ತದೆ. ಜಾತಿಯ ಸಾಂಸ್ಕೃತಿಕ ಹಿನ್ನೆಲೆಯನ್ನು ನಮ್ಮ ಮಗು ಹುಟ್ಟಿನೊಂದಿಗೇ ಪಡೆದಿರುವದರಿಂದ ಅವನ ಪ್ರಕೃತಿಗೆ ಒಗ್ಗದ ವಿಷಯಗಳಾದ ದೈಹಿಕ ಶ್ರಮ, ಕಾರ್ಯಕ್ಷಮತೆ ಮುಂತಾದವು ಪಾಠಪಟ್ಟಿಯಲ್ಲಿ ಇರದಿರುವದರಿಂದ ಅವನು ಯಶಸ್ವಿಯಾಗಿ ಶಿಕ್ಷಣ ಮುಗಿಸುತ್ತಾನೆ. ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾದ ಪ್ರಮಾಣ ಪತ್ರ, ಮೇಲ್ಜಾತಿಯ ಪ್ರಭಾವ ಅಥವಾ ಹಣದ ಬಲದಿಂದ ಬೇಗ ಉತ್ತಮ ನೌಕರಿಯು ದೊರೆಯುತ್ತದೆ.

ನಾವು ಕೀಳು ಜಾತಿಯವರಾಗಿದ್ದರೆ ನಮ್ಮ ಸಮಸ್ಯೆಗಳೇ ಬೇರೆ. ನಮ್ಮ ಮಗುವಿಗೆ ಶೈಕ್ಷಣಿಕ ಹಿನ್ನೆಲೆಯೇ ಇರುವದಿಲ್ಲ. ಸಾವಿರಾರು ವರ್ಷಗಳ ಅವಿದ್ಯೆಯ ಪರಂಪರೆಯನ್ನು ಹೊಂದಿ ಅದೇ ಮೊದಲಿಗೆ ಪಾಟಿಯನ್ನು ಹಿಡಿದವನು ಉಳಿದವರೊಂದಿಗೆ ಸ್ಪರ್ಧಿಸಿಯಾನೆ? ಇದಲ್ಲದೆ ಹೊಟ್ಟೆ ಪಾಡಿನ ಚಿಂತೆ. ಹತ್ತು ಹನ್ನೆರಡು ವರ್ಷದ ಮಗುವಾದ ಕೂಡಲೇ ಅವನಿಗೆ ದೊರೆಯಬಹುದಾದ ಕೂಲಿಯ ಆಸೆ ಅವನ ಶಿಕ್ಷಣಕ್ಕೆ ಆಗಲೇ ಮಂಗಳ ಹಾಡುತ್ತದೆ. ಅಷ್ಟಾಗೂ ದೈವ ಗಟ್ಟಿಯಿದ್ದು ಶಿಕ್ಷಣ ಮುಂದುವರಿದರೆ ಹತ್ತನೆಯ ವರ್ಗಕ್ಕೋ, ಪದವಿಗೋ ಬಂದು ಮುಟ್ಟಬೇಕಾದರೆ ಸಾಕುಬೇಕಾಗಿರುತ್ತದೆ. ತನ್ನ

ಜೀವನದ ದರಿದ್ರ್ಯ ಸಂಬಂಧಿಸದ ಇದರ, ಅದಕ್ಕೆ ಸಂಬಂಧಿಸದ ವಿಷಯಗಳನ್ನು ಯೋಚಿಸದ ಪ್ರಶ್ನೆಗಳನ್ನು ಬರೆದು ಅಂಕವನ್ನು ಗಿಟ್ಟಿಸುವುದು ಕೆಳಗಿನ ದರ್ಜೆಯನ್ನೇ. ಇಂಥ ವಿದ್ಯಾರ್ಥಿಗಳನ್ನು ಯಾರೂ ಮುಟ್ಟುವ ಅವಶ್ಯಕತೆಯಿಲ್ಲದೆ, ಜಾತೀಯ ಪ್ರಭಾವದ ಬಲವಿದ್ದವರಿಗೆ ದೊರಕಿದ ಸ್ಥಾನ ಪೂರ್ವಜನ್ಮದ ಪುಣ್ಯ.

ಸುಶಿಕ್ಷಿತರಾದ, ಬಿ.ಎ., ಎಂ.ಎ., ಇಂಗ್ಲಿಷ್ ಜ್ಞಾನದ ಬಲಹೊಂದಿರುವ ಪದವೀಧರರು: ಯಾವ ಬಗ್ಗೆ ಗಣ್ಯರ ಸಾಮಾನ್ಯ ನೌಕರ ಇಬ್ಬರಿಬ್ಬರೂ ದೇಶದ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ತಮ್ಮ ಪಾತ್ರವೇನೆಂದು ವಿಚಾರಿಸಿದಾಗ ನಮಗಾಗುವುದು ಕಹಿ ಅನುಭವ. ಯಾವ ಕಚೇರಿಗೆ ಹೋದರೂ ಕಚೇರಿ ಪ್ರಾರಂಭವಾದ ಒಂದು ಗಂಟೆಯ ವರೆಗೆ, ಮುಚ್ಚುವ ಒಂದು ಗಂಟೆ ಮೊದಲು ನಮಗೆ ಯಾರೂ ಸಿಕ್ಕುವದಿಲ್ಲ. ಶಿಕ್ಷಣದ ಒಳ್ಳೆಯ ಫಲಗಳಾದ ಪ್ರಾಮಾಣಿಕತೆ, ಕರ್ತವ್ಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಇವಾವೂ ನಮ್ಮ ಶಿಕ್ಷಣದ ಭಾಗವಾಗದೆ ಇರುವುದೇ ಇದಕ್ಕೆ ಕಾರಣ. ಕಚೇರಿಗಳಲ್ಲಿ, ಕಾರ್ಖಾನೆ ಮತ್ತಿತರ ಸಾರ್ವಜನಿಕ ರಂಗಗಳಲ್ಲಿ ಕಂಡು ಬರುವ ಸಾರ್ವತ್ರಿಕ ಅದಕ್ಷತೆಯ ಜೊತೆಗೆ ಎಲ್ಲ ರಂಗಗಳಲ್ಲಿ ತಾಂಡವವಾಡುತ್ತಿರುವ ಸ್ವಜನ ಪಕ್ಷಪಾತ ಲಂಚಗುಳಿತನಗಳೂ ನಮ್ಮ ಬಡತನದ ಬೆಳವಣಿಗೆಗೆ ಕಾರಣ.

ಪ್ರತಿ ವರ್ಷವೂ ೧೨೫೦ ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಸರಕಾರ ವೆಚ್ಚ ಮಾಡುತ್ತದೆ. ರಕ್ಷಣೆಯ ನಂತರದ ಅತಿ ಹೆಚ್ಚಿನ ವೆಚ್ಚದ ಬಾಬು ಇದು. ಸಾರ್ವಜನಿಕರಾದ ನಮಗೂ ಇದು ದುಬಾರಿ ವ್ಯವಹಾರ. ಒಬ್ಬ ವ್ಯಕ್ತಿಯ ಶಿಕ್ಷಣಕ್ಕೆ ವರ್ಷಕ್ಕೆ ಕನಿಷ್ಠವೆಂದರೂ ಸಾವಿರದಿಂದ ಎರಡು ಸಾವಿರ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕು. ಈ ವೆಚ್ಚದಲ್ಲಿ ಸಾರ್ವಜನಿಕ ಹಣ ಸರಕಾರದ ನಾಲ್ಕೈದು ಪಟ್ಟಾದರೂ ಹೆಚ್ಚಿರುತ್ತದೆ. ಅಂದರೆ ಸುಮಾರು ಆರು ಸಾವಿರ ಕೋಟಿ ರೂಪಾಯಿಗಳಷ್ಟಾಯಿತು. ಉತ್ಪಾದನೆಯ ದೃಷ್ಟಿಯಿಂದ ಈ ಬಂಡವಾಳವನ್ನು ನೋಡಿದಾಗ ಶಿಕ್ಷಣವೊಂದು ಅತ್ಯಂತ ನಷ್ಟ ಅನುಭವಿಸುವ ಸರಕಾರಿ ಉದ್ಯಮವೆನಿಸುತ್ತದೆ.

ನಮ್ಮ ಶಿಕ್ಷಣ ಕ್ಷೇತ್ರದಲ್ಲಿಯದು ಗುಣಾತ್ಮಕತೆಯ ಜೊತೆಗೆ ಔದ್ಯೋಗಿಕ ಆಡಳಿತ ಮತ್ತು ಸಾಂಪತ್ತಿಕ ಬೆಳವಣಿಗೆಯ ದೃಷ್ಟಿಯಿಂದಲೂ ಬದಲಾವಣೆಗಳಾಗಬೇಕಾಗಿದೆ.

ಗುಣಮಟ್ಟದ ಮಾತು ಬಂದಾಗ ಇಂದಿನ ಶಿಕ್ಷಣದಲ್ಲಿ ಅಕ್ಷರ ಜ್ಞಾನವೊಂದನ್ನು ಬಿಟ್ಟು ಬೇರಾವ ಮೌಲ್ಯವೂ ಕಂಡು ಬರುವದಿಲ್ಲ. ಅಕ್ಷರಜ್ಞಾನದ ಜೊತೆಗೆ ಬರಬೇಕಾಗಿದ್ದ ಕರ್ತವ್ಯ ಪ್ರಜ್ಞೆ, ಪ್ರಾಮಾಣಿಕತೆ, ವೈಯುಕ್ತಿಕದ ಜೊತೆಗೆ ಸಾಮಾಜಿಕ ಔನ್ನತ್ಯದ ಬೆಳವಣಿಗೆಯ ಕಳಕಳಿ ಇವೆಲ್ಲವುಗಳೂ ಶಿಕ್ಷಣದೊಂದಿಗೇ ಒಬ್ಬ ವ್ಯಕ್ತಿಯಲ್ಲಿ ಮೂಡಿಬರುವಂತಾಗಬೇಕು. ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ಉಂಟಾದ ಶಿಕ್ಷಣ ಪ್ರಸಾರದೊಂದಿಗೆ; ಅದರ ಪರಿಣಾಮ ಸಾರ್ವಜನಿಕ ಜೀವನದ ಮೇಲೆ ಉಂಟಾಗದಿರುವದಕ್ಕೂ ಮೇಲಿನ ಮೌಲ್ಯಗಳ ಅಭಾವವೇ ಕಾರಣ.

ಈ ಇಪ್ಪತ್ತೇಳು ವರ್ಷಗಳಲ್ಲಿ ಪ್ರಜಾಪ್ರಭುತ್ವ ನಿರಂಕುಶ ಸರ್ವಾಧಿಕಾರತ್ವದ ಕಡೆಗೆ ಸಾಗುತ್ತಿರುವದನ್ನು ನಾವೆಲ್ಲರೂ ಮೂಕ ಪ್ರೇಕ್ಷಕರಂತೆ ನೋಡುತ್ತಾ ನಿಂತಿದ್ದೇವೆ. ಜೀವನದ ಕಾಲುಭಾಗವನ್ನು ವ್ಯಯಿಸಿ ಪಡೆಯುವ ಶಿಕ್ಷಣದಲ್ಲಿ ಪ್ರಜಾಪ್ರಭುತ್ವ. ಸಂವಿಧಾನಗಳ ಜ್ಞಾನ ನೀಡುವ, ದೇಶದ ಸಮಸ್ಯೆಗಳ ಬಗೆಗೆ ವಿದ್ಯಾವಂತರ ಲಕ್ಷ್ಯ ಸೆಳೆಯುವ ಯಾವ ಪ್ರಯತ್ನವೂ ಇಲ್ಲ. ವಿದ್ಯಾವಂತನಿಂದು ರಾಜಕೀಯ ಅಸ್ಪೃಶ್ಯನಾಗಿದ್ದಾನೆ. ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬಾರದು, ನೌಕರರು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಬಾರದು ಎಂದು ನಿರ್ಬಂಧ ವಿಧಿಸಿರುವ ನಮ್ಮ ಸರಕಾರ ಪ್ರಜಾಪ್ರಭುತ್ವದ ಬೆಳವಣಿಗೆಗೆ ವಿದ್ಯಾವಂತರಿಂದ ಸಲ್ಲಬೇಕಾದ ಸೇವೆಗೆ ವಂಚನೆಯೊಡ್ಡಿದೆ.

ನಮ್ಮ ಸ್ವತಂತ್ರ ವೈಚಾರಿಕ ಶಕ್ತಿಯ ಅಭಾವ ಐದು ಸಾವಿರ ವರ್ಷಗಳ ಹಿನ್ನೆಲೆಯನ್ನು ಹೊಂದಿದೆ. ಮನುಷ್ಯನ ಈ ಅಮೂಲ್ಯ ಸರಕಿನ ಸದುಪಯೋಗ ಮಾಡಿಕೊಳ್ಳುವ ಪ್ರಯತ್ನ ಶಿಕ್ಷಣ ಪದ್ಧತಿಯಲ್ಲಿ ಇಲ್ಲವೇ ಇಲ್ಲ. ಪಠ್ಯಪುಸ್ತಕದ ಭಾಗಗಳನ್ನು ಉರು ಹೊಡೆದು ಪರೀಕ್ಷೆಯಲ್ಲಿ ಉತ್ತೀರ್ಣರಾದ ಕೂಡಲೇ ನಮ್ಮ ಜೀವನದಲ್ಲಿ ಓದುವದು, ಬರೆಯುವದು, ವಿಚಾರಿಸುವದು ಏನೂ ಉಳಿದಿಲ್ಲವೆಂದುಕೊಳ್ಳುತ್ತೇವೆ. ಇದೇ ಪ್ರವೃತ್ತಿ ನಮ್ಮಲ್ಲಿಂದು ತಾಂಡವವಾಡುತ್ತಿರುವ ಭ್ರಷ್ಟಾಚಾರ, ಕಾಳಸಂತೆ, ರಾಜಕೀಯ ಹಗಲುದರೋಡೆಗಳ ಬಗೆಗಿನ ಅಸೀಮ ನಿರ್ಲಕ್ಷವಾಗಿ ಮಾರ್ಪಟ್ಟಿದೆ. ರಾಜಕೀಯವೊಂದು

ಶೋಷಕರ, ಪ್ರಭುಗಳ ಮತ್ತು ಜನಸಾಮಾನ್ಯರ ವ್ಯವಹಾರ: ಇದರಲ್ಲಿ ನಮ್ಮ ಪಾತ್ರವೇ ಇಲ್ಲವೆಂದು ನಮ್ಮ ದೃಢವಾದ ನಂಬಿಕೆ.

ಈ ಕೊರತೆಗಳೆಲ್ಲಾ ದೂರವಾಗಬೇಕಾದರೆ ನಮ್ಮ ಜನಜೀವನದ ದೈನಂದಿನ ಆಚಾರ ವ್ಯವಹಾರಗಳೂ ಶಿಕ್ಷಣದ ಭಾಗವಾಗಬೇಕು. ಆಗ ನಾವು ಸಾಮಾನ್ಯ ಜನವರ್ಗದ ಬಗೆಗೆ ಆತ್ಮೀಯವಾಗಿ ವ್ಯವಹರಿಸಲು ತೊಡಗುತ್ತೇವೆ. ನಮ್ಮ ಪ್ರಜಾಪ್ರಭುತ್ವ ಸಂವಿಧಾನ ಮತ್ತು ದೇಶದ ಸಮಸ್ಯೆಗಳ ನಿಕಟ ಪರಿಚಯ ನೀಡುವ ಪಾಠಪಟ್ಟಿ ನಮ್ಮದಾದಾಗ ನಮ್ಮಲ್ಲಿ ವೈಚಾರಿಕತೆ ಬೆಳೆಯಬಹುದೇನೋ. ಇವೆಲ್ಲವುಗಳ ಜೊತೆಗೆ ಸುಶಿಕ್ಷಿತರ ಮೇಲಿನ ನಿರ್ಬಂಧಗಳೆಲ್ಲವೂ ಇಲ್ಲವಾಗಬೇಕು.

ಸುಶಿಕ್ಷಿತನನ್ನು ಅಶಿಕ್ಷಿತನಿಂದ ಬೇರ್ಪಡಿಸುವ ಶಕ್ತಿ ಮತ್ತು ಸಾಧನ ಶಿಕ್ಷಣ ಮಾಧ್ಯಮ. ಹಿಂದಿನ ಸಂಸ್ಕೃತದ ಸ್ಥಾನದಲ್ಲಿ ನಾವು ಇಂಗ್ಲಿಷನ್ನು ತಂದು ಕೂಡಿಸಿದ್ದೇವೆ. ಅಶಿಕ್ಷಿತನಿಗೆ ಗೊತ್ತಿರಲಾರದ ಒಂದು ವಿದ್ಯೆ ತನ್ನಲ್ಲಿದೆಯೆಂದು ಕೊಂಡು ವಿದ್ಯಾವಂತ ತಾನು ಅವನಿಗಿಂತ ಹೆಚ್ಚಿನವನು ಎನ್ನುವ ಭಾವನೆಯನ್ನು ಹೊಂದಿರುತ್ತಾನೆ. ಈ ಭಾವನೆಯೇ ಪರಸ್ಪರದಲ್ಲಿ ಪರಕೀಯತೆಯನ್ನು ಪ್ರೇರೇಪಿಸುತ್ತದೆ. ಜನಸಾಮಾನ್ಯನ ಭಾಷೆ ಶಿಕ್ಷಣ ಮಾಧ್ಯಮವಾಗದೆ ಈ ಬಿರುಕು ಎಂದಿಗೂ ಒಂದುಗೂಡುವದಿಲ್ಲ. ಪರಕೀಯ ಭಾಷೆ ಸಂಪರ್ಕ ಸಾಧನವಾಗಿರುವ ವರೆಗೆ ಕಚೇರಿಗಳಲ್ಲಿ ಮತ್ತು ಎಲ್ಲಾ ವ್ಯವಹಾರ ರಂಗಗಳಲ್ಲಿ ಜನಸಾಮಾನ್ಯನ ಶೋಷಣೆ ತಪ್ಪುವದಿಲ್ಲ.

ಶಿಕ್ಷಣವೇ ಜೀವನ ಮಾರ್ಗ ಎನ್ನುವ ಭಾವನೆ ಬ್ರಿಟಿಷರ ಆಳ್ವಿಕೆಯ ಫಲವಾಗಿ ನಮ್ಮಲ್ಲಿ ಬೇರುಬಿಟ್ಟಿದೆ. ಆ ಭಾವನೆ ನಮ್ಮಲ್ಲಿ ದೂರಾದಾಗ ಅಕ್ಷರವಂತರೆಲ್ಲರೂ ಬದುಕಬೇಕಾದರೆ ನೌಕರಿಯೇ ಬೇಕು ಎನ್ನುವ ಹಳವಂಡ ನಮ್ಮನ್ನು ಬಿಡುತ್ತದೆ. ಆಗ ನೌಕರಿಯನ್ನೊದಗಿಸಿ ಅವನ ಬದುಕಿನ ಭಾರವನ್ನು ಹೊರುವ ಹೊಣೆ ಸರಕಾರಕ್ಕೆ. ಹಾಗೆ ಇಲ್ಲವಾಗಿ ಅಷ್ಟು ಹಣ ರಾಷ್ಟ್ರಕ್ಕೆ ಉಳಿತಾಯವಾಗುತ್ತದೆ. ಇಂದು ನೌಕರಿಯಲ್ಲಿರುವ ನಾವು ಯಾರೂ ಜನತೆಗೆ ಉಪಯೋಗವಾಗುವ ಸಂಪತ್ತನ್ನು ಉತ್ಪಾದಿಸುತ್ತಿಲ್ಲ. ಶಿಕ್ಷಣದ ನಂತರ

ನಾವು ಸ್ವತಂತ್ರ ಉದ್ಯೋಗದಲ್ಲಿ ತೊಡಗುವುದಾದರೆ ಉಂಟಾಗುವ ಉತ್ಪಾದನೆಯ ಹೆಚ್ಚಳ ಸಾರ್ವತ್ರಿಕ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ.

ಶಿಕ್ಷಣದ ನಂತರ ಸ್ವತಂತ್ರ ಉದ್ಯೋಗ ಕೈಗೊಳ್ಳಲು ನಮಗಾವ ಅಡ್ಡಿ ಆತಂಕಗಳಿಲ್ಲ. ಆದರೆ ನಮ್ಮ ಜೀವನದ ಕಾಲುಭಾಗವನ್ನು, ಹತ್ತರಿಂದ ಇಪ್ಪತ್ತು ಸಾವಿರಗಳ ವರೆಗೆ ದುಡ್ಡನ್ನು ವ್ಯಯಿಸಿ ಕಲಿತ ವಿದ್ಯೆ ಸ್ವತಂತ್ರ ಉದ್ಯೋಗದಲ್ಲಿ ಕಿಂಚಿತ್ತೂ ನಮಗೆ ಸಹಾಯಕವಾಗುವದಿಲ್ಲ. ಒಕ್ಕಲಿಗನಾಗಲು, ನೇಕಾರನಾಗಲು, ಮೋಚಿಯಾಗಲು ನಾವು ಸ್ವತಂತ್ರರಿದ್ದರೂ, ವಿದ್ಯಾವಂತರಾಗಲಿ ನಾವು ವ್ಯಯಿಸಿದ ಹಣ ಹಾಗಾಗಲು ಬಿಡುವದಿಲ್ಲ.

ಎರಡನೆಯ ಆತಂಕವೆಂದರೆ ಮನೆತನದ ಉದ್ಯೋಗವನ್ನೇ ಮುಂದುವರೆಸಿಕೊಂಡು ಹೋದಲ್ಲಿ ನಾವು ಒಕ್ಕಲಿಗ, ಬಡಗಿ, ಮೋಚಿ, ನೇಕಾರ ಇತ್ಯಾದಿಯಾಗಿ ಕರೆಸಿಕೊಳ್ಳುತ್ತೇವೆ ಈ ಹೆಸರುಗಳು ಜಾತಿಸೂಚಕವೂ ಆಗಿರುವದರಿಂದ ನಾವು ಪಡೆದ ಶಿಕ್ಷಣ ಸಮಾಜದಲ್ಲಿ ನಮ್ಮ ಸ್ಥಾನಮಾನವನ್ನು ಉತ್ತಮಗೊಳಿಸಲು ಸಹಾಯಕವಾಗುವದಿಲ್ಲ. ಆಗ ಅನಿವಾರ್ಯವಾಗಿ ನೌಕರಿಯ ಮೊರೆ ಹೋಗುತ್ತೇವೆ. ನೌಕರಿ ಎಂತಹ ಕೀಳೇ ಇದ್ದರೂ ಅಕ್ಷರಜ್ಞಾನದ ಪ್ರತೀಕವೆನಿಸುವದರಿಂದ ಸಾಮಾಜಿಕವಾಗಿ ಗಣ್ಯರೆನಿಸಿಕೊಳ್ಳದಿದ್ದರೂ ಕೀಳೆಂದು ಮಾತ್ರ ಪರಿಗಣಿತರಾಗುವದಿಲ್ಲ.

ದೈಹಿಕ ಶ್ರಮ ಕೀಳೆಂದು ಸಾವಿರಾರು ವರ್ಷಗಳಿಂದಲೂ ನಮ್ಮಲ್ಲಿ ರೂಢಮೂಲವಾದ ಭಾವನೆಗಳು ನಮ್ಮ ಈ ಪಲಾಯನವಾದಿತ್ವಕ್ಕೆ ಪ್ರೇರಕ. ಇದು ನಮ್ಮಿಂದ ದೂರಾಗಬೇಕಾದರೆ ದೈಹಿಕ ಶ್ರಮವೂ ಶಿಕ್ಷಣದ ಭಾಗವಾಗಬೇಕು. ಕಾಯಕದ ಮಹತ್ವ (Dignity of Labour) ವನ್ನು ನಮಗೆ ಅರಿವು ಮಾಡಿಕೊಡುವ ಶಿಕ್ಷಣ ನಮ್ಮದಾಗಬೇಕು.

ನಿರುದ್ಯೋಗ ಹೆಚ್ಚಿಸಲು ಮತ್ತೊಂದು ಮುಖ್ಯ ಕಾರಣವೆಂದರೆ ಪದವಿ ಶಿಕ್ಷಣಕ್ಕೆ ನಮ್ಮಲ್ಲಿರುವ ಅವಾಸ್ತವ ಮಹತ್ವ. ಇದು ಮುಂದೆ ಯಾವ ಉದ್ಯೋಗದಲ್ಲಿಯೂ ಸಹಾಯಕವಾಗುವದಿಲ್ಲ. ಪದವೀಧರರೆಲ್ಲರೂ ಕಾರಕೂನಿಕೆಯನ್ನೇ, ಇನ್ನಾವದೋ ಹುದ್ದೆಯನ್ನೇ ಹಿಡಿದಾಗ ಅಲ್ಲಿ ಅಗತ್ಯವಿರುವದು ಇಂಗ್ಲಿಷಿನ ವ್ಯಾವಹಾರಿಕ ಜ್ಞಾನವೇ ಹೊರತು ನಾವು ಕಲಿತ ವಿಜ್ಞಾನ, ಅರ್ಥಶಾಸ್ತ್ರ

ಇತ್ಯಾದಿ ವಿಷಯಗಳಲ್ಲಿ. ಇಂಥ ಪದವಿಗಳ ಬದಲಿಗೆ ಆಯಾ ಉದ್ಯೋಗಗಳಿಗೆ ಆಗತ್ಯವಿರುವ ಪರಿಣತಿಯನ್ನೇ ಅರ್ಹತೆಗೋಲಾಗಿ ಪರಿಗಣಿಸಬೇಕು. ಆಗ ಪದವಿ ಪಡೆಯುವುದೇ ಶಿಕ್ಷಣದ ಪರಮ ಗುರಿ ಎಂಬ ಭಾವನೆ ನಮ್ಮಿಂದ ದೂರಾಗುತ್ತದೆ.

ನಮ್ಮ ದೇಶವನ್ನು ಕಾಡುತ್ತಿರುವ ಅಜ್ಞಾನ, ಅಪಾರ, ಬಡತನಗಳಂಥಹ ಸಮಸ್ಯೆಗಳ ಒಸ್ಸೆಲೆ ಪಡೆದ ಶಿಕ್ಷಣ ನಮ್ಮದಾಗಬೇಕು. ನೂರಕ್ಕೆ ಎಂಬತ್ತರಷ್ಟು ಒಕ್ಕಲಿಗರು, ಕೂಲಿಕಾರರು, ಶ್ರಮಿಕರಿರುವ ನಮ್ಮ ಸಮಾಜದಲ್ಲಿ ನಮ್ಮ ಉದ್ಯೋಗಗಳ ಬಗೆಗಿನ ಜ್ಞಾನವೊಂದನ್ನು ಬಿಟ್ಟು ಎಲ್ಲವೂ ಇದೆ. ನಮ್ಮ ಶಿಕ್ಷಣದಲ್ಲಿ ಬಡಗಿಯಾಗಬೇಕಾದರೆ ತಾಂತ್ರಿಕ ಶಾಲೆಯನ್ನೋ, ಕಮ್ಮಾರನಾಗಬೇಕಾದರೆ, ಮೋಚಿಯಾಗಬೇಕಾದರೆ, ಕುಂಬಾರ, ನೇಕಾರರಾಗಬೇಕಾದರೆ ಪರದೇಶಗಳನ್ನೋ, ಒಕ್ಕಲಿಗನಾಗಬೇಕಾದರೆ ಒಕ್ಕಲುತನ ಕಾಲೇಜನ್ನೋ ಅವಲಂಬಿಸಬೇಕಾಗಿದೆ. ಜನಸಂಖ್ಯೆ ಮತ್ತು ಆಗತ್ಯದ ದೃಷ್ಟಿಯಿಂದ ಇದು ಅಸಾಧ್ಯವೂ, ವ್ಯಾವಹಾರಿಕವಾಗಿ ಅನಾವಶ್ಯಕವೂ ಆಗಿದೆ.

ಜನಜೀವನಕ್ಕೆ ಸಂಬಂಧವಿಲ್ಲದ ಇತಿಹಾಸ, ಭೂಗೋಲ, ಇಂಗ್ಲಿಷ್, ಸಾಮಾಜಿಕ ಪಾಠಗಳನ್ನು ಕಲಿಸುವ ನಾಯಿಕೊಡೆಗಳಂತೆ ಪ್ರತಿದಿನವೂ ಹುಟ್ಟುವ ಇಂದಿನ ಶಾಲೆಗಳ ಬದಲಿಗೆ ಒಕ್ಕಲುತನ ಶಾಲೆಗಳು, ಬಡಗಿತನ, ಕಮ್ಮಾರಿಕೆ, ನೇಕಾರಿಕೆ, ಚಮ್ಮಾರಿಕೆಯನ್ನು ಕಲಿಸುವ ಶಾಲೆಗಳ ಸ್ಥಾಪನೆಯಾಗಬೇಕು. ಇಂಥ ಶಿಕ್ಷಣವನ್ನು ಪಡೆದವನು ಎಂದೂ ತನ್ನ ಅಗತ್ಯಗಳಿಗೆ ಸರಕಾರವನ್ನು, ಜನತೆಯನ್ನು ಅವಲಂಬಿಸುವದಿಲ್ಲ. ಈಗಿರುವ ಶಾಲೆಗಳಲ್ಲಿ ನೂರಕ್ಕೆ ಎಂಬತ್ತರಷ್ಟಾದರೂ ಇಂತಹ ವೃತ್ತಿ ಶಿಕ್ಷಣ ಶಾಲೆಗಳಾಗಿ ಮಾರ್ಪಟ್ಟಾಗ ನಮ್ಮಲ್ಲಿ ನಿರುದ್ಯೋಗದ ಸೊಲ್ಲೇ ಇರುವದಿಲ್ಲ. ಆಗ ಬಡಗಿ, ಒಕ್ಕಲಿಗ, ಕಮ್ಮಾರ, ನೇಕಾರ, ಮೋಚಿ ಇತ್ಯಾದಿ ಉದ್ಯೋಗಸ್ಥರ ಮಕ್ಕಳೆಲ್ಲರೂ ತಮ್ಮ ತಮ್ಮ ಉದ್ಯೋಗಗಳಲ್ಲಿ ಪರಿಣತರಾಗಿ ಉತ್ಪಾದನೆಯನ್ನು, ಸಂಪತ್ತನ್ನು ಹೆಚ್ಚಿಸಲು ಕಾರಣರಾಗುತ್ತಾರೆ. ಸರ್ವರಂಗಗಳಲ್ಲಿಯೂ ಎದ್ದು ಕಾಣುತ್ತಿರುವ ಇಂದಿನ ಪರಾವಲಂಬನ ತಪ್ಪಿ ನಾವು ಸ್ವಯಂಪೂರ್ಣರಾಗುತ್ತೇವೆ.

ಶಿಕ್ಷಣ ಪ್ರಸಾರದ ಪ್ರಯತ್ನಗಳು ಇಷ್ಟು ಹೆಚ್ಚುಗೊಂಡರೂ ನೂರಕ್ಕೆ ೨೫ ರಷ್ಟು ಮಕ್ಕಳು ಶಾಲಾ ಶಿಕ್ಷಣ, ೧೦ ರಿಂದ ೧೨ ರಷ್ಟು ಕಾಲೇಜು ಶಿಕ್ಷಣ ಮತ್ತು

ಶೇಕಡಾ ಐದರಷ್ಟು ಸ್ನಾತಕೋತ್ತರ ಶಿಕ್ಷಣ ಪಡೆಯುವರೆಂದು ಸಮೀಕ್ಷೆಯೊಂದು ತಿಳಿಸುತ್ತದೆ. ಶಿಕ್ಷಣದಿಂದ ವಂಚಿತರಾಗುವ ಉಳಿದ ಮುಕ್ಕಾಲು ಪಾಲು ಜನರನ್ನು ಅಕ್ಷರಸ್ಥರನ್ನಾಗಿ ಮಾಡುವ ಯಾವ ಕಾರ್ಯಕ್ರಮಗಳನ್ನೂ ನಾವು ಹೊಂದಿಲ್ಲ. ಈ ಜನರೆಲ್ಲರೂ ಶಾಶ್ವತ ಅಜ್ಞಾನಿಗಳಾಗಿರುವದೇ ನಮ್ಮ ಇಂದಿನ ಸರ್ವ ಜಾಡ್ಯಗಳ ಮೂಲ. ನೂರಕ್ಕೆ ನೂರರಷ್ಟು ತಿಳುವಳಿಕೆಯುಳ್ಳ ಮತದಾರರನ್ನು ಹೊಂದಿ ಆಡಳಿತವನ್ನು ಕಪಿಮುಷ್ಟಿಯಲ್ಲಿರಿಸಿಕೊಳ್ಳುವದು ಅಸಾಧ್ಯ. ಅದಕ್ಕೇ ಅಧಿಕಾರ ಹೊಂದಿದ ಜನರಿಗೆ ಈ ಬಗ್ಗೆ ಅನಾಸಕ್ತಿ.

ಹಳ್ಳಿಗಳಲ್ಲಿ, ಹೊಲಗದ್ದೆಗಳಲ್ಲಿ, ಇನ್ನಿತರ ರಂಗಗಳಲ್ಲಿ ದುಡಿಯುವದನ್ನು, ಅದರೊಂದಿಗೇ ಸಾರ್ವಜನಿಕ ಶಿಕ್ಷಣ ಕೊಡುವದನ್ನು ನಮ್ಮ ಪದವಿ ಶಿಕ್ಷಣದ ಅವಿಭಾಜ್ಯ ಅಂಗವನ್ನಾಗಿ ಮಾಡಬೇಕು. ಬರಿಯ ಶಿಕ್ಷಣ ವರ್ಷಗಳನ್ನು ಹೆಚ್ಚಿಸುವ ಬದಲು ಅದೇ ಹೆಚ್ಚಿನ ಒಂದು ವರ್ಷವನ್ನು ಕಡ್ಡಾಯವಾಗಿ, ವೈದ್ಯಕೀಯ ಶಿಕ್ಷಣದಲ್ಲಿಯಂತೆ, ಇಂತಹ ಚಟುವಟಿಕೆಗಳಿಗೆ ಮೀಸಲಾಗಿಟ್ಟಾಗ ಶಿಕ್ಷಿತ ಅಶಿಕ್ಷಿತರ ನಡುವಿನ ಅಂತರ ದೂರವಾಗಿ ಹಾರ್ದಿಕ ಸಂಬಂಧ ಬೆಳೆಯುತ್ತದೆ. ಅಶಿಕ್ಷಿತ, ಸುಶಿಕ್ಷಿತನಾದಾಗ ನಮ್ಮ ದೇಶಕ್ಕೆ ಅಂಟಿಕೊಂಡಿರುವ ಜಾಡ್ಯಗಳ ನಿವಾರಣೆಗೆ ತಕ್ಕ ವಾತಾವರಣ ನಿರ್ಮಾಣವಾಗುತ್ತದೆ.

■ ■ ■

ಟಿ. ಜಿ. ಭಟ್ಟ

ನಾಲ್ಕು 'ಮಿನಿ'ಗವನಗಳು

೧. ಕವನ

ನಮ್ಮಂತರಾಳದಲಿ ಅಲೆವ ಮೀನುಗಳನೆಲ್ಲ
ಶಬ್ದಜಾಲದಿ ಹಿಡಿದು ನೋಡೊ ಶ್ರಮ.
ಬೇತಾಳ ಹೊಕ್ಕಿರುವ ಶವವ ಮರದಿಂದಿಳಿಸಿ
ಹೆಗಲಿಗೇರಿಸಿ ಹೊರಟ ಈ ವಿಕ್ರಮ.

೨. ಸಂಪ್ರದಾಯ

ಸಾಂಬ ಭಟ್ಟರ
ಮೂರು ಮೊಳುದ್ದ ಮುಂಗಚ್ಚೆ
ಬಗ್ಗಿ ನಮಿಸೆದ್ದಾಗ ಬಿಚ್ಚುತಿತ್ತು.

ಉದ್ದ ಕೋಟಿನ ಸಾಂಬಭಟ್ಟರ ಮಗನು
ತಾನೂ ನಮಿಸೆದ್ದಾಗ
ಬಿಚ್ಚಿ
ಸಿಗಿಸುತ್ತಿದ್ದ.

೩. ಪ್ರಶ್ನೆ

ಎಂಟಾಳೆತ್ತರದ ಧರೆ ಕೆಳಗೆ ಬಿದ್ದೂ
ಬದುಕುಳಿದದ್ದು
ಸತ್ತ ಅಪ್ಪಜ್ಜಂದಿರ ಪುಣ್ಯದಿಂದ ಎಂದು
ನೋಡಬಂದವರೆಲ್ಲ ಜಾಯೆಳಿದಾಗ
ಸಾಕಾಗಿ
"ಹೌದೆ ? ನಾನಲ್ಲಿ ಬಿದ್ದದ್ದು ನಿಮ್ಮಲ್ಲಿ ಯಾರ ಪಾಪಕ್ಕೆ?" ಎಂದ.

೪. ನಾನು

ಚಿಂತೆ–ಚಿಂತನೆಗಳ ಅಗ್ನಿಕುಂಡನಲಿ
ಬೂದಿಯಾಗುತಿಹ ಕಿರಿ ಕೆಂಡ ನಾನು.
ಅಮಾಸೆ ರಾತ್ರಿಯಲಿ ಭೂತ ಸಂಚಾರಕ್ಕೆ
ಹಿಡಿದ ಧಗ–ಧಗ ಉರಿವ ಸೂಡಿ ನಾನು.
ಘರ್ಷ–ಸಂಘರ್ಷದಲಿ ಉರಿದು ಉದುರಿ ತಗೋ
ಕೆಳಗೆ, ಕಗ್ಗತ್ತಲಲಿ ಉಲ್ಕೆ ನಾನು.

ಶಶಿಕಲಾ ದೇಶಪಾಂಡೆ

ಎರಡು ಕವನಗಳು

ವಿರಹ : ೧

ಪೊಕ್ಕಳಿನಿಕ್ಕಳದಲ್ಲಿ ಸಿಕ್ಕಿಸಿದವನು
ಎಲ್ಲಿ ಹೋದ
ತಂಗಾಳಿ ಮರ ಮರನ ಮುಟ್ಟಿತಟ್ಟಿ
ಎಬ್ಬಿಸಿ ಹಾಡಿ, ಹಾಡಿಸಿದತ್ತ
ನನ್ನ ಕರೆದೊಯ್ದಾತ ಎತ್ತ ಹೋದನೋ ಏನೋ

ನನ್ನಿಡೀ ರಾತ್ರಿಗಳಲ್ಲಿ ಚಕ್ರವಾಕ ಸಂಗತಿಗಳ
ಹೇಳುತ್ತ
ಕವನ ತಿರುಗುವ ಗತ್ತಿನಲ್ಲಿ ಮಾಂಸವನ್ನೆಲ್ಲ
ನಾದುತ್ತ
ಹದವಾಗಿ, ಹಿತವಾಗಿ, ಮೃದುವಾಗಿ
ಮುತ್ತಿದವನೇ ಬಾರೋ

ಇಡಿ ಇಡೀ ಶಾಖದಲ್ಲಿ ನನ್ನ ಭಗಭಗನೆ ಬೇಯಿಸಿ
ತಿನ್ನು ತಿನ್ನು ಎಂದು ಕೊಟ್ಟಹಾಗೆಲ್ಲ
ಸಾಕೆನ್ನದ ಭೂಪ
ಈಗ ತಾಳಲಾರೆ ಚಂದ್ರಮ ತಾಪ
ಎತ್ತ ಹೋದೆಯೋ.

ಊರಿ ಮಾರಮ್ಮನ ಡೋಲು, ಉರಿಮೆ
ಸೋಮ ಕುಣಿತ, ಬೇಡರ್ ಮುಹಿಮೆ
ಸೆಕೆ, ಸೆಕೆ, ಹಸಿವು, ಹಸಿವು ಎಂದೂ
ಮೈ ತುಂಬ ಬಂದಿದೆ, ಕುಣಿಯುತ್ತಿದ್ದೇನೆ

ಬಾರೋ, ಕುಣಿತಕ್ಕೊಮ್ಮೆ ಡೋಲು ಬಾರಿಸು
ಉರಿವ ಕೊಳ್ಳಿಯ ಮತ್ತಷ್ಟು ಉರಿಸು.

ವಿರಹ : ೨

ಎಲೆ ಕಣ್ಣೇ ಎಲೆ ಕಣ್ಣೇ
ಕಣ್ಣ ಹಾಕಿಟ್ಟ ನನ್ನ ದೇಹದೊಳಹುಣ್ಣೇ
ಎಷ್ಟು ಕೊರಗಿಸುವೆಯಮ್ಮ

ಅಂಬಾ ತಾಯಿ ನಿನ್ನ ಮೈಮೆಯನೆಷ್ಟು ವರ್ಣಿಸಲಮ್ಮ
ಹಿತವಾಗಿ ಜತೆಯಾಗಿ
ಕ್ಯಾಂಟೀನ ಕಾಫಿಯಲಿ ಕನ್ನಡಿಯಾಗಿ
ಮಾತು ಮಾತಿನ ಹಿಂದೆ ಹರಳಾಗಿ
ಹೊಂಟಂಗೆ ನಾನು ಮಣ್ಣಾಗಿ
ಮತ್ತೆ ಮೀಸೆ ಬಿಡುವ ಚಿಂತೆಯಲ್ಲಿ ಕೊಚ್ಚಾಗಿ
ನಿನ್ನ ಹಿಂದೇ ಸುತ್ತಬೇಕೆನಿಸಿದಂತೆ
ಹೊರಳಿದಂತೆಲ್ಲ ನಿನ್ನ ಹಂಡುಗಳಸುತ್ತ
ಬೆಲ್ಲಾಗಬೇಕೆನಿಸುತ್ತೆ
ಆನೆ ಪ್ಯಾಂಟನೊಳಗಿನೊಳತೊಡೆ
ಗೆ ಅಂಟು ಜಿಗಣೆಯಾಗಬೇಕೆನಿಸಿ
ಎನಿಸಿ, ಎನಿಸಿ, ತತ್ತರೆ ಬೇಸರವೆನಿಸಿ
ಎದ್ದು, ಕಾಫಿ ಕುಡಿದು, ಸಿಗರೇಟು ಸೇದುತ್ತ
ಪೇಟೆಯಲಿ ಚಂದಾಗಿ
ಕಣ್ಣು ಹಾಯಿಸುತ್ತ, ಒಂಟಿಯಾಗಿ ಕೊರಗುತ್ತ
ಸಾಗುತ್ತೇನೆ.

■ ■ ■

ಗೌರೀಶ ಕಾಯ್ಕಿಣಿ

ಬೆಕೆಟ

ನಾಟಕ ಪರಿಚಯ

'ಬೆಕೆಟ್' ಜ್ಯಾಂ ಅನೂಯಿಯ ನಾಟಕ. ಅನೂಯಿಯು ಫ್ರೆಂಚ್ ನಾಟಕಕಾರ. ಒಂದು ಪ್ರಮಾಣದಲ್ಲಿ ಈ ನಾಟಕದ ಸ್ವಾಗತ ಅತಿ ಉತ್ಸಾಹದಿಂದ ಆಗಿದೆ. ಶೇಕ್ಸ್‌ಪಿಯರನ ಹ್ಯಾಮ್ಲೆಟ್, ಒಥೆಲೊ ಗಳೊಂದಿಗೆ ಹೋಲಿಸಬಹುದಷ್ಟು ತೂಕದ ಬೆಲೆಯ ನಾಟ್ಯ ಕೃತಿ ಇದು.

ಕೆಲವು ವರ್ಷಗಳ ಹಿಂದೆಯೇ ನಮ್ಮ ಹಿರಿಯ ಕನ್ನಡ ನಾಟಕಕಾರರೂ ಆದ ಶ್ರೀ ಪಿ. ವಾ. ಶಿವಸ್ವಾಮಿಗಳು 'ಬೆಕೆಟ್' ನಾಟಕವನ್ನು ಭಾಷಾಂತರಿಸಿ-ದ್ದಾರೆ. (ಶಿವಸ್ವಾಮಿಗಳು ಶೇಕ್ಸ್‌ಪಿಯರನ ಅನೇಕ ಪಠ್ಯವನ್ನು.) ಈಚೆಗೆ ಇಂಡಿಯನ್ ನ್ಯಾಶನಲ್ ಥಿಯೇಟರಿನ ಶ್ರೀ ಸತೀಶ ದುಭಾಷಿಯವರು ಅತ್ಯಂತ ಯಶಸ್ವಿಯಾಗಿ ರಂಗಕ್ಕೆ ತಂದು ಪ್ರದರ್ಶಿಸಿದ್ದಾರೆ.

ಅನೇಕಾನೇಕ ಪಾತ್ರಗಳು, ದೃಶ್ಯಗಳ ಮಹಾಪೂರ ಹೊಂದಿರುವುದರಿಂದ ಈ ಬಲಿಷ್ಠ ನಾಟಕವು ಎಂಥಾ ಪ್ರಾಯೋಗಿಕ ರಂಗ ನಿರ್ದೇಶಕನ ಪ್ರತಿಭೆಗೂ ಒಂದು ಆಹ್ವಾನ. ಇದು ನಿರ್ದೇಶಕನ ನಾಟಕ. ನಟನಿಗೂ ಪ್ರೇಕ್ಷಕನಿಗೂ ಅಷ್ಟೇ. ಈ ನಾಟಕದ ಹೂರಣವೆ ಕಲ್ಪಕತೆಗೇ ಒಂದು ಸವಾಲು. ೨೨ ಪಾತ್ರಗಳು ರಂಗದಲ್ಲಿ ಒಟ್ಟಿಗೆ ತಪ್ಪದೆ ರಸಸೃಷ್ಟಿ ಮಾಡುವ ಈ ಕಲೆಯ ಅದರ ಶಕ್ತಿ ಉತ್ತಮ ನಿರ್ದೇಶನವಿಲ್ಲದೆ ಸಾಧ್ಯವೇ ಇಲ್ಲ.

ಇಂಥ ಈ ನಾಟಕದ ವಸ್ತುವಿನ್ಯಾಸವೇನು? ಇದೇ ವಸ್ತುವನ್ನು ಆಧರಿಸಿ ನಮ್ಮ ಮಹಾಕವಿ ಟಿ. ಎಸ್. ಎಲಿಯಟ್‌ನ "ಮರ್ಡರ್ ಇನ್ ದ ಕ್ಯಾಥೆಡ್ರಲ್" (ಪ್ರಾರ್ಥನಾ ಮಂದಿರದಲ್ಲಿ ಕೊಲೆ) ಎಂಬ ಪ್ರಖ್ಯಾತ ನಾಟಕ ಬೆಳೆದಿದೆ.

ಶೇಕ್ಸಪಿಯರನ ಒಂದು ಐತಿಹಾಸಿಕ ನಾಟಕದಲ್ಲಿಯೂ ಈ ಕಥಾಂಶವು ಸುಳಿದು ಹೋಗಿರಬೇಕು.

ಥಾಮಸ ಬೆಕೆಟ ೧೨ ನೆಯ ಶತಮಾನದಲ್ಲಿ ಆಗಿಹೋದ. ಇಂಗ್ಲಂಡದ ಕ್ಯಾಂಟರ್ಬರಿಯ ಧರ್ಮಾಧ್ಯಕ್ಷ (ಆರ್ಕಬಿಷಪ್.) ಆದರೆ ಈ ನಾಟಕದಲ್ಲಿ ನಾಟಕೀಯವಾಗಿ ತರ್ಕಬದ್ಧವಾಗಿ ಬಂದ ಚಿತ್ರಣ. ಬೆಕೆಟ ಧರ್ಮಾಧ್ಯಕ್ಷ ನಾದದ್ದು ಹೇಗೆ ಮತ್ತು ಆದಮೇಲೆ ಅವನಲ್ಲಿ ಎಂಥ ಕ್ರಾಂತಿ ಒದಗಿ ಬಂದಿತು ಎಂಬುದರ ಮಾನವೀಯ ಪಾತಳಿಯಲ್ಲಿ ಮಾಡಿದ ವಿಶ್ಲೇಷಣೆ.

ಬೆಕೆಟ ಇಂಗ್ಲಂಡದ ದೊರೆ ೨ನೆಯ ಹೇನ್ರೀ ಇವನ ಜೀವದ ಗೆಳೆಯ. ಶೂರ ಯೋಧ, ನಿಷ್ಠಾವಂತ ಮಿತ್ರ, ಪ್ರಖರ ಬುದ್ಧಿಶಾಲಿ ಮತ್ತು ಪ್ರಾಮಾಣಿಕ ಮಾನವತಾವಾದಿ. ಇಂಥ ವ್ಯಕ್ತಿ ದೊರೆಯ ಮನಸ್ಸನ್ನೇ ಸೂರೆಮಾಡಿದ್ದರೆ ಅದು ಆಶ್ಚರ್ಯವಿಲ್ಲ. (ಇಂತಹದೇ ಒಂದು ಮೈತ್ರೀಯೋಗದ ನಾಟ್ಯಮಯ ಚಿತ್ರಣ ಕರ್ಣ-ದುರ್ಯೋಧನರಲ್ಲಿ ನಮ್ಮ ನವ್ಯ ನಾಟಕಕಾರರು ಗುರುತಿಸಿ ರೂಪಿಸಲಾರರೇ ?)

ಇವರಿಬ್ಬರ ಗೆಳೆತನ ಅತ್ಯಂತ ಘನಿಷ್ಠವಾಗಿದ್ದಾಗ, ದೊರೆ ಹೇನ್ರೀ ಮತ್ತು ಥಾಮಸ ಬೆಕೆಟರ ನಡುವೆ ಒಂದು ವಾದವೇಳುತ್ತದೆ. ಧರ್ಮಸಂಸ್ಥೆ (ಚರ್ಚ) ಯುದ್ಧಕ್ಕಾಗಿ ರಾಜನಿಗೆ ಧನಸಹಾಯ ಮಾಡಬೇಕೆಂದು ದೊರೆ ಹೇನ್ರೀ ಬೇಡಿಕೆ ಇಡುತ್ತಾನೆ. ಆದರೆ ಈ ರೀತಿ ಚರ್ಚಗಳಿಂದ ಕರಾಕರಣೆ ಅನ್ಯಾಯವೆಂದು ಧರ್ಮಸಂಸ್ಥೆಯ ನಿಲುವು ಇರುತ್ತದೆ. ಆ ಸಮಯಕ್ಕೆ ಥಾಮಸ್ ಬೆಕೆಟ ಧರ್ಮಾಧಿಕಾರಿಗಳೊಂದಿಗೆ ತರ್ಕವಾದ ಮಾಡಿ ಅವರನ್ನು ಸೋಲಿಸುತ್ತಾನೆ. ಅದಕ್ಕಾಗಿ ರಾಜನು ಸಂತುಷ್ಟನಾಗಿ ಮಿತ್ರ ಬೆಕೆಟನನ್ನು ಇಂಗ್ಲಂಡದ ಚಾನ್ಸಲರ ನಾಗಿ ನೇಮಿಸುತ್ತಾನೆ. ಈ ನೇಮಕವನ್ನು ಧರ್ಮಾಧಿಕಾರಿಗಳು ತಮ್ಮ ಇಚ್ಛೆಯ ವಿರುದ್ಧವೇ ಒಪ್ಪಿಕೊಳ್ಳುತ್ತಾರೆ.

ಬೆಕೆಟ ರಾಜನಷ್ಟೇ ರಸಿಕನಾಗಿರುತ್ತಾನೆ. ಅವನ ವಿಲಾಸ ಭೋಗಗಳಲ್ಲಿಯೂ ಒಂದು ಸಡಗರ ಬೆಡಗು ಇರುತ್ತದೆ. ಆದರೆ [illegible]ವಿಲ್ಲ. ಭೋಗ

ನಿರಾಸೆಗಳಲ್ಲಿ ಈತನಿಗೆ ಆಸಕ್ತಿ ಕಡಿಮೆ. ಇವನ ಈ ಗುಣಕ್ಕಾಗಿಯೂ ರಾಜ ಬೆಕೆಟನಲ್ಲಿ ಇನ್ನಷ್ಟು ಮಾರುಹೋಗಿರುತ್ತಾನೆ.

ಒಮ್ಮೆ ಬೆಕೆಟನ ಜತೆಗೆ ಹೆನ್ರೀ ಬೇಟೆಗೆ ಹೋಗುತ್ತಾನೆ. ಅಲ್ಲಿ ಒಂದು ಗುಡಿಸಲಿನಲ್ಲಿ ಒಬ್ಬ ಮುದುಕನ ಹದಿನೆಂಟು ವರ್ಷ ಪ್ರಾಯದ ಕೋಮಲ ಕನ್ನೆ ಸಿಗುತ್ತಾಳೆ– ಎಂಥಾ ಚೆಲುವೆ? ಮುದುಕನ ಮಗನೇ ಅವಳ ಕಾವಲುಗಾರ! ರಾಜನು ಅವಳನ್ನು ಗೋಣಿ ಚೀಲದಂತೆ ಧಡೀರನೆ ಎಳೆದು ಕೊಂಡೊಯ್ಯುತ್ತಾನೆ. ರಾಜನ ಈ ಅವಮಾನದ ವ್ಯವಹಾರಕ್ಕೆ ಕೆರಳಿದ ಆ ಹುಡುಗಿಯ ಸೋದರನು ಚೂರಿ ಹಿಡಿದು ಒಮ್ಮೆಲೆ ಬೆಕೆಟನ ಮೇಲೆ ಎರಗಿ ಬರುತ್ತಾನೆ. ಆದರೆ ಬೆಕೆಟ ಅವನನ್ನು ಸಂತೈಸಿ ದಾರಿಯ ಖರ್ಚಿಗೆ ಕೊಟ್ಟು ಬಿಡುಗಡೆ ಮಾಡುತ್ತಾನೆ.

ರಾಜನಿಗೆ ಇದು ಗೊತ್ತಾಗಿದ್ದರೆ ಆ ಹುಡುಗನಿಗೆ ಜೀವದಾನವೇ ಸಿಗುತ್ತಿದ್ದಿಲ್ಲ. ಆದ್ದರಿಂದ ರಾಜನಿಷ್ಟಿಗಾಗಿ ತಾನು ಮಾಡಿದ ಈ ಸಾಹಸದ ಹೋರಾಟವನ್ನೆಲ್ಲ ಆತ ಮಿತ್ರನಾದ ರಾಜನಿಗೆ ಹೇಳದೆ ಬಚ್ಚಿಡುತ್ತಾನೆ. ಆದರೆ ಬೆಕೆಟನ ಉದ್ದೇಶ ಆ ಕೋಮಲ ಎಳೆಹರೆಯದ ಕನ್ನೆಯನ್ನು ರಕ್ಷಿಸುವುದಿತ್ತು. ಆದ್ದರಿಂದ ಆತ ತನ್ನ ಮಿತ್ರನಿಂದ ಈ ಹುಡುಗಿಯನ್ನು ಕಾಣಿಕೆಯಾಗಿ ಪಡೆದುಕೊಳ್ಳುತ್ತಾನೆ. ಆದರೆ ಈ ಕಾಣಿಕೆಗೆ ಪ್ರತಿಕಾಣಿಕೆ ಕೊಡಬೇಕಾಗಿತ್ತು– ಎಂಬ ಹೇಸ್ತಿಯ ಕರಾರನ್ನು ಬೆಕೆಟ ಒಪ್ಪುತ್ತಾನೆ. ಬೆಕೆಟ ಆ ಕನ್ನೆಯನ್ನು ಅವಳ ಮುದಿ ತಂದೆಯ ವಶಕ್ಕೆ ಒಪ್ಪಿಸಿ ತಿರುಗಿ ಹೋಗುತ್ತಾನೆ.

ಆ ಕನ್ನೆಯ ಬಾಯಿಯಿಂದ ಬೆಕೆಟನ ಹೊಗಳಿಕೆಯ ಒಂದೇ ಒಂದು ಶಬ್ದ ಹೊರ ಬೀಳುತ್ತದೆ. ಆದರೆ ರಾಷ್ಟ್ರೀಯ ಅಭಿಮಾನದಿಂದ ಹೆಚ್ಚು ತಿಳಿಯಬೇಕಾಗುತ್ತದೆ. ಈ ಪ್ರಸಂಗದಲ್ಲಿ ಒಳಿತು ಮಾಡುವ ಒಂದೇ ಉದ್ದೇಶದಿಂದ ಹಾಗೆಯೇ ಮಾನವೀಯ ಪ್ರೇಮದ ಸ್ವಭಾವವನ್ನು ಬೆಕೆಟ ಮಾಡುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಗ್ವೆಂಡೊಲೀನ್ ಬೆಕೆಟನ ಪ್ರೇಯಸಿ. ಅವಳನ್ನು ಆತ ಗೆದ್ದು ತಂದಿದ್ದ. ಆದರೂ ಅವಳ ಗುಣಗಳಿಗೆ ಮಾರುಹೋಗಿ ಅವಳನ್ನು ತನ್ನ ಒಡನಾಡಿಯನ್ನಾಗಿ ಇಟ್ಟು ಕೊಂಡಿದ್ದನು. ರಾಜ ಬೆಕೆಟನ ಕೋಣೆಯಲ್ಲಿಯೇ ಬೇಟೆ ವಿಶ್ರಮಿಸುತ್ತಿದ್ದಾಗ

ಹೇನ್ರಿ ಮತ್ತೇರಿದವನಾಗಿ ಅಲ್ಲಿ ಬರುತ್ತಾನೆ ಮತ್ತು ಹಿಂದಿನ ಕರಾರು ಪೂರೈಸುವ ಹಟ ಹಿಡಿಯುತ್ತಾನೆ– ಕಾಣಿಕೆಗೆ ಮರುಕಾಣಿಕೆ ಸಲ್ಲಿಸೆಂದು. ಈ ಪೇಚು ಮಹಾ ಬಿಕ್ಕಟ್ಟಿನದು. ಗ್ರೈಂಡೊಲಿನ್‌ಳ ಮನಸ್ಸು ಬೆಕೆಟನಿಗೆ ಗೊತ್ತು. ಆದರೆ ಅವಳ ಮೇಲೆ ಬೆಕೆಟನ ಪ್ರೇಮವಿತ್ತೆ ? ರಾಜನು ಅವನಿಗೆ ಇದೇ ಪ್ರಶ್ನೆಯನ್ನು ಹಾಕುತ್ತಾನೆ. ಅದಕ್ಕೆ ಬೆಕೆಟನ ಉತ್ತರ : "ನನ್ನ ಪ್ರೇಮ ಯಾರ ಮೇಲೆಯೂ ಇಲ್ಲ. ನನ್ನ ಪ್ರೇಮವಿರುವದು ಕೇವಲ ನನ್ನ ಕರ್ತವ್ಯದ ಮೇಲೆ. ಯಾವ ಕ್ಷಣಕ್ಕೆ ಯಾವ ಕೆಲಸ ಕೈಗೆ ಬರುವದೋ ಅದನ್ನು ನನ್ನ ಸರ್ವಸ್ವವನ್ನು ಧಾರೆ ಎರೆದು ಚೆನ್ನಾಗಿ ಈಡೇರಿಸುವದು– ಇದೇ ನನ್ನ ಪ್ರೇಮದ ಸ್ವರೂಪ."
ಬೆಕೆಟ ಸ್ಯಾಕ್ಸನ್. ಆದರೂ ರಾಜನಿಷ್ಠ (ಹೇನ್ರಿಯು ವಂಶ ಫ್ರಾನ್ಸಿನದು.) ವಚನಕ್ಕೆ ಬದ್ಧನಾಗಿದ್ದರಿಂದ ಬೆಕೆಟ ತನ್ನ ಪ್ರೇಯಸಿಯನ್ನ ರಾಜನಿಗೆ ಕೊಟ್ಟು ಬಿಡುತ್ತಾನೆ ! ಆದರೆ ಆಕೆ ಆ ದೊರೆಗೆ ದಕ್ಕುವದಿಲ್ಲ. ರಾಜನ ಭೋಗದ ಮಂಚದಲ್ಲಿಯೆ ಎದೆಗೆ ಕಠಾರಿ ಇರಿದುಕೊಂಡು ಗ್ರೈಂಡೊಲೆನ್ ತನ್ನ ಕೊನೆ ಗಾಣಿಸಿಕೊಳ್ಳುತ್ತಾಳೆ. ಹೇನ್ರಿ ಗಾಬರಿಯಾಗುತ್ತಾನೆ. ಮತ್ತೊಮ್ಮೆ ಈ ಪ್ರಸಂಗದಿಂದ ವಿವಿಧ ಮಾನವೀ ಭಾವಸ್ಪಂದನಗಳ ದರ್ಶನ ಒಂದೇ ಸಮಯಕ್ಕೆ ಪ್ರೇಕ್ಷಕರಿಗೆ ಸಿಗುತ್ತದೆ.

ಬೆಕೆಟ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಲೇ ಇದ್ದ. ಮಹತ್ವತೆಯನ್ನು ಮುಟ್ಟುವ ಯತ್ನದಲ್ಲಿದ್ದ. ಆದರೂ ಈ ವರೆಗೆ ಅವನಿಗೆ ತನ್ನ ಶ್ರೇಯಸ್ಸು ಕಂಡಿದ್ದಿಲ್ಲ. ಈ ಸಂಧಿಯನ್ನು ದೊರೆ ಹೇನ್ರಿಯೇ ಅವನಿಗೆ ಒದಗಿಸಿಕೊಟ್ಟನು.
ರಾಜನು ಫ್ರಾನ್ಸದ ದಂಡಯಾತ್ರೆಯಲ್ಲಿದ್ದಾಗ ಕ್ಯಾಂಟರ್ಬರಿಯ ಧರ್ಮಾಧ್ಯಕ್ಷ ತೀರಿಕೊಂಡ ವಾರ್ತೆ ಅವನಿಗೆ ತಲುಪಿತು. ರಾಜನಿಗೆ ವಿಲಕ್ಷಣ ಆನಂದವಾಯಿತು. ಅವನ ಉದ್ದೇಶ ಧರ್ಮಾಧಿಕಾರಿಗಳನ್ನು ಮಟ್ಟುವದಿತ್ತು. ಧರ್ಮಸಂಸ್ಥೆಯ ಮೇಲೆ ರಾಜಸತ್ತೆಯನ್ನು ಸ್ಥಾಪಿಸುವದಿತ್ತು. ಅಂದಾಗ ಈ ಹಿರಿಯ ಧರ್ಮಪೀಠಕ್ಕೆ ತನ್ನ ಮಿತ್ರನನ್ನೆ ಏರಿಸಿದರೆ ತನ್ನದೊಂದು ತಲೆಶೂಲಿ ಕಾಯಂ ತೊಲಗುವದೆಂದು ಹೇನ್ರಿ ಲೆಕ್ಕಹಾಕಿದನು.

ಬೆಕೆಟನನ್ನು ಧರ್ಮಾಧಿಕಾರಿಯನ್ನಾಗಿ ಮಾಡುವ ನಿರ್ಧಾರ ಈತ ಮಾಡಿದನು. ಈ ಕುರಿತು ಬೆಕೆಟ ರಾಜನಿಗೆ ಅಂದನು: "ನನ್ನನ್ನು ಈ ನೋಹದಲ್ಲಿ ನೂಕಬೇಡ.

ಕೆಂದರೆ ಧರ್ಮಾಧಿಕಾರಿ ಆದಮೇಲೆ ನಾನು ನಿನ್ನ ಗೆಳೆಯನಾಗಿ ಉಳಿಯು
ರೆ. ದೊರೆ ಮತ್ತು ದೇವರು– ಈ ಇಬ್ಬರ ಸೇವೆಯನ್ನು ನಾನು ಒಂದೇ
ಳಿಗೆ ಮಾಡಲಾರೆ." ಆದರೆ ರಾಜನಿಗೆ ಈ ಗಂಡಾಂತರ ಅರ್ಥವಾಗಲಿಲ್ಲ.
ತ ಬೆಕೆಟನನ್ನೆ ಕ್ಯಾಂಟರ್ಬರಿಯ ಆರ್ಚ ಬಿಷಪ್‌ನಾಗಿ ನೇಮಿಸಿದ ಆದೇಶ
ಹೊರಡಿಸಿದನು. ಮತ್ತು ತನಗೇ ಗೊತ್ತಿಲ್ಲದೆ ಬೆಕೆಟನನ್ನು ತನಗೆ ಸರಿಸಮಾನ
ಾದ ಮಟ್ಟದಲ್ಲಿ ತಂದು ಇಟ್ಟನು.

ಧರ್ಮಾಧ್ಯಕ್ಷನಾದೊಡನೆ, ಬೆಕೆಟ ಒಳಹೊರಗೆ ಪೂರ್ತಿ ಬದಲಾದನು. ಸರಳ
ಾದಾ ಶುಚಿರ್ಭೂತ ಜೀವನವನ್ನು ಆರಂಭಿಸಿದನು ತನ್ನ ಚಿನ್ನದ ಬಟ್ಟಲು–
ತಾಟುಗಳನ್ನು ಮಾರಿಬಿಟ್ಟನು. ಮರದ ಮಣ್ಣಿನ ಪಾತ್ರೆಗಳಲ್ಲಿ ಉಣ್ಣಲು
ಆರಂಭಿಸಿದನು. ತನ್ನ ಪಙ್ಕ್ತಿಗೆ ಸರದಾರ–ಮನ್ನೆಯರನ್ನು ಊಟಕ್ಕೆ ಕರೆದು
ಕೂಡ್ರಿಸಿಕೊಳ್ಳುವ ಬದಲು ತಿರುಕರನ್ನು ಬಡವರನ್ನು ಕರೆಯುಹತ್ತಿದನು.

ಇದರಿಂದ ಜನತೆಯ ಹೃದಯದಲ್ಲಿ ಅವನ ಬಿಂಬವು ಉಜ್ವಲವಾಯಿತು. ಜನ
ಅವನನ್ನು ಮಹಾತ್ಮನೆಂದು ಭಾವಿಸಹತ್ತಿದರು. ಆದರೆ ಧರ್ಮಾಧಿಕಾರಿಗಳು,
ಇತರ ಧರ್ಮಗುರುಗಳು ಅವನನ್ನು ದ್ವೇಷಿಸತೊಡಗಿದರು. ಆದರೆ ಇದಕ್ಕೂ
ಭಯಂಕರ ಅವಸ್ಥೆ ದೊರೆ ಹೆನ್ರಿಯದಾಯಿತು. ದೊರೆಗೆ ಬೆಕೆಟನ ಒಡನಾಟ
ವಿಲ್ಲದೆ ಚೈನೇ ಇದ್ದಿಲ್ಲ. ಆದರೆ ಬೆಕೆಟ ಈಗ ಭೆಟ್ಟಿಯಾಗುತ್ತಲೇ ಇದ್ದಿಲ್ಲ.
ಅವನಿಗಾಗಿ ದೊರೆ ಸಿಟ್ಟಾದನು. ಆದರೆ ಅದೇ ಸಮಯ ತನ್ನ ಹೆಂಡತಿ ಮತ್ತು
ತಾಯಿ ಬೆಕೆಟನ ಬಗೆಗೆ ದ್ವೇಷ ಮಾಡಿ ಅವನನ್ನು ಬಯ್ಯುವದೂ ಅವನಿಗೆ
ಸಹನವಾಗಲಿಲ್ಲ! "ನಿಮ್ಮೆಲ್ಲರ ಬುದ್ಧಿ ಒಟ್ಟು ಹಾಕಿದರೂ ಅದಕ್ಕಿಂತ ಬೆಕೆಟನ
ಬುದ್ಧಿ ಮತ್ತೆ ಮಿಗಿಲು, ಹಿರಿದು!" –ಎಂದು ಆತ ತನ್ನ ತಾಯಿಗೂ ರಾಣಿ
ಯರಿಗೂ ಖಾರವಾಗಿಯೇ ಹೇಳುತ್ತಿದ್ದನು. ಅವರ ಬುದ್ಧಿಗೇಡಿ ಸಹವಾಸ
ದಲ್ಲಿ ಅವನ ಮನಸ್ಸು ಕೈಸಿದು. ತಲೆ ಇಲ್ಲದ ರಾಜಪುತ್ರರು ಅವನಿಗೆ ಕಣ್ಣಿದು
ರಿಗೆ ಬಂದರೆ ಆಗದು.

ೀಗೆ ಒಂದೆಡೆಗೆ ಬೆಕೆಟನ ಬಗ್ಗೆ ರಾಜನು ತಳಮಳಿಸುತ್ತಿದ್ದರೂ ಇನ್ನೊಂದೆಡೆಗೆ
ಅವನನ್ನು ಕ್ಷಮಿಸಲೂ ಆತನ ಮನಸ್ಸು ಸಿದ್ಧವಿದ್ದಿಲ್ಲ! ಏಕೆಂದರೆ ಇದೀಗ

ಎರಡು ಸಮಾನ ಸತ್ತಾ ಕೇಂದ್ರಗಳ ಮತ್ತು ಕ್ಷೇತ್ರಗಳ ನಡುವೆ ಹೋರಾಟವಿತ್ತು. ಬೆಕೆಟನನ್ನು ಬಗ್ಗಿಸಬೇಕೆಂದು ರಾಜನ ಜಿದ್ದು. ಅದಕ್ಕಾಗಿ ಅವನು ಬೆಕೆಟನ ಅಧಿಕಾರ ಕ್ಷೇತ್ರದಲ್ಲಿ ಕೈಹಾಕಿದನು. ಅವರಿಬ್ಬರಲ್ಲಿಯೂ ಪ್ರಕಟವಾಗಿಯೇ ಹೋರಾಟ ಆರಂಭವಾಯಿತು. ಈ ದ್ವಂದ್ವ ಒಳ್ಳೆ ರಂಗಿಗೆ ಬಂತು.

ಬೆಕೆಟ ದೇಶಾಂತರ ಹೋಗಬೇಕಾಯಿತು. ಆದರೆ ಅಂಥ ಪರಿಸ್ಥಿತಿಯಲ್ಲಿಯೂ ಅವನು ತನ್ನ ದೊಡ್ಡಿಸ್ತಿಕೆಯನ್ನು ಮರೆಯಲಿಲ್ಲ. ಆದ್ದರಿಂದ ರಾಜನಿಗೆ ಆತ ಇನ್ನೂ ಹೆಚ್ಚು ಮೆಚ್ಚಿಗೆಯಾದ. ಇದರೆ ಅದೇ ವೇಳೆಗೆ ಅವನೊಂದಿಗೆ ಹೋರಾಟವೂ ಇನ್ನೂ ಹೆಚ್ಚು ತೀವ್ರವಾಯಿತು.

ಫ್ರಾನ್ಸಿನಲ್ಲಿ ಹೇನ್ರಿ–ಬೆಕೆಟ ಭೆಟ್ಟಿಯಾದರು. ಆ ಭೆಟ್ಟಿ ಅಭೂತಪೂರ್ವ, ಅಸಾಮಾನ್ಯ ನೋಟವೆನಿಸಿತು.

ಬೆಕೆಟ ಮರಳಿ ಇಂಗ್ಲಂಡಿಗೆ ಬಂದನು. ಆದರೆ ಮಣಿಯಲಿಲ್ಲ. ಕೊನೆಗೂ ಅಸಹ್ಯವೆನಿಸಿ ರಾಜನು ಅವನ ಮೇಲೆ ಕೊಲೆಗಡುಕರನ್ನು ಅಟ್ಟಿದನು. (ಆದರೆ ಇತಿಹಾಸದಂತೆ ಹೇನ್ರಿಯು ಬೆಕೆಟನ ಕೊಲೆ ತಾನೇ ಬುದ್ಧಿಪೂರ್ವಕ ಮಾಡಿಸಲಿಲ್ಲ. ಅವನ ಬಾಲಬಡಕ ದರಬಾರಿಗಳಾರೋ ಇದೇ ಸಂಧಿಸಾಧಿಸಿ ರಾಜನ ಅನುಗ್ರಹ ಸಂಪಾದಿಸಬಹುದೆಂದು ತಾವೇ ಮುಂದಾಗಿ ದುಡುಕಿ ಬೆಕೆಟನ ವಧೆ ಮಾಡಿದರು. ಪ್ರಾರ್ಥನಾ ಮಂದಿರದಲ್ಲಿ, ಪ್ರಾರ್ಥನೆಯಲ್ಲಿ ಆತ ತೊಡಗಿದ್ದಾಗ, “ಇವನಿಂದ ನಮ್ಮನ್ನು ಯಾರೂ ಪಾರು ಮಾಡಲಾರರೇ !” ಎಂದು ಒಮ್ಮೆ ಹೇನ್ರಿ ಅಸಹಾಯ ಸಿಟ್ಟಿನಲ್ಲಿ ಉದ್ಗಾರ ತೆಗೆದನು. ಅದನ್ನು ರಾಜಾಜ್ಞೆಯೆಂದು ಇಟ್ಟುಕೊಂಡು ಆ ದುಷ್ಟ ಕೊಲೆಗಡಕರು ಹೋಗಿ ಬೆಕೆಟನನ್ನು ಮುಗಿಸಿಬಿಟ್ಟರು, ಎಂದು ಇತಿಹಾಸ ಹೇಳುತ್ತದೆ. ಆದರೆ ಅದೇನೇ ಆದರೂ ಈ ಕೊಲೆಯ ನೈತಿಕ ಹೊಣೆ, ಪಾಪದ ಹೊರೆ ಹೇನ್ರಿಯ ತಲೆಗೇ ಹೇರಿದೆ.) ಬೆಕೆಟನ ಕೊಲೆಯಿಂದ ಸ್ಯಾಕ್ಸನ್ ಪ್ರಜೆ ರೊಚ್ಚಿಗೆದ್ದಿತು. ರಾಜನು ಬೆಕೆಟನ ಗೋರಿಯ ಇದುರು ಬರಿಮೈಯಲ್ಲಿ ಕೂತು ಸ್ಯಾಕ್ಸನ್ ಸಿಪಾಯರಿಂದ ಚಾಟಿಯ ಏಟುಗಳನ್ನು ತಿನ್ನಬೇಕು ಈ ಪ್ರಾಯಶ್ಚಿತ್ತ ಪಡೆದರೇನೇ ರಾಜನಿಗೆ ಯುದ್ಧದಲ್ಲಿ ಪ್ರಜೆ ಧನಸಹಾಯ ಮಾಡುವದೆಂದು ಕರಾರುಹಾಕಿತು.

ಬೆಕೆಟನ ಪ್ರೀತಿ ಮತ್ತು ರಾಜ್ಯದ ಹಿತಕ್ಕಾಗಿ ರಾಜನು ಇದನ್ನು ಒಪ್ಪಿದನು– ಅನುಭವಿಸಿದನು.

ಈ ನಾಟಕದ ಆರಂಭವೇ ಹೇನ್ರಿ ಮಿತ್ರನ ಗೋರಿಯ ಇದುರು ಬರಿಮೈಯಲ್ಲಿ ಕೂತಲ್ಲಿಂದ. Flash back ತಂತ್ರದಿಂದ ಮುಂದೆ ನಾಟಕ ತೆರೆ ತೆರೆಯಾಗಿ ತೆರೆಯುತ್ತದೆ. ಮತ್ತು ಕೊನೆಗೆ ಸ್ಯಾಕ್ಸನ್ ಆಳುಗಳಿಂದ ಚಾಟಿಯಾ ಏಟು ತಿನ್ನುವದರಲ್ಲಿ ನಾಟಕವು ಮುಗಿಯುತ್ತದೆ.

ಹೀಗಿದೆ 'ಬೆಕೆಟ'. ಕನ್ನಡ ರಂಗದಲ್ಲಿ ಈ ನಾಟಕ ಮೈವೆತ್ತಿ ನಿಲ್ಲುವ ದಿನಕ್ಕೆ–ರಾತ್ರಿಗೆ–ಎಷ್ಟು ಕಾಯಬೇಕೋ !

■ ■ ■

ಬಿ. ಫಕೀರಗೌಡ

ಒಂದು ಕ್ಷಣ

ಕತ್ತಲೆಯ ಹಾದರದಿಂದೆದ್ದು,
ಹೆಗಲ ಮೇಲೆ ಹಗಲ–ಬಳಸಿ
ಬಂಗಾರದ ಕಿರಣ ಬೀರುವ
ಈ ಬೆಳ್ಳಿಗೋಲದ ಶೀಲಕ್ಕೆ
ಬದಲಾಗಿ–
ನಿನ್ನೆ ರಾತ್ರಿ ಹರಿದು ತಿಂದ
ವ್ಯಕ್ತ–ಅವ್ಯಕ್ತ ಭಾವನೆಗಳಿಗೆ
ಪ್ರತಿಯಾಗಿ

ತುಕ್ಕು ಹಿಡಿದ ಹರುಷ ತಿಕ್ಕಿ
ನಗೆಸೂಸಿ, ನೀಟಾಗಿ ನಿಂತ
ನಿನ್ನ ಮೋಡಿಯನ್ನೊಂದು ಕ್ಷಣ
ನುಂಗಿದಾಗ :
ಪೋರಿ....
ಹಳೇ ಬೀಡು, ಬೇಲೂರುಗಳ
ಸೊಲ್ಲು ತುಂಬಿದ ಕರಿಯ ಕಲ್ಲುಗಳಲಿ
ಅರಳಿ ನಿಂತ ಶಿಲಾಬಾಲಿಕೆಯರ
ನೆನಪು.
ನನ್ನ ಕೈ ಕಾಲು ಕಟ್ಟಿ
ನಿನ್ನ ಕಣ್ಣಿನಲ್ಲಿಯೆ ಕಣ್ಣಿಟ್ಟು
'ತೃಪ್ತಿ' ಪಡೆಯಬೇಕೆಂದನಿಸುತ್ತದೆ !

DEVU PATTAR
GUTTIPETH,
SHAHAPUR-585223

CREATIVE AND CRITICAL
WRITINGS IN KANNADA

•

SANKRAMANA

ಸಂಕ್ರಮಣ

•

ರಚನಾತ್ಮಕ ಹಾಗೂ ವಿಮರ್ಶಾ
ಲೇಖನಗಳು